# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper
70,000
HAMPI TIMES E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:01 Volume:01 • ಸಂಚಿಕೆ:338 Issue:338 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 12.06.2024 12.06.2024 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2


## ಪರಿಸರ ಸಂರಕ್ಷಣೆ ಎಲ್ಲರ ಹೊಣೆ

### ಎಬಿವಿ ಮೃಗಾಲಯದ ಉಪವಲಯ ಅರಣ್ಯ ಅಧಿಕಾರಿಗಳಾದ ಭೀಮರಾಯ ಅಭಿಮತ



**ಜೂನ್ 5ರಂದು ವಿಶ್ವ ಪರಿಸರ ದಿನಾಚರಣೆಯನ್ನು ಸಾಂಕೇತಿಕವಾಗಿ ಆಚರಿಸಲಾಗುತ್ತಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯು ಮಳೆಗಾಲ ಅವಧಿಯುದ್ದಕ್ಕೂ ಒಂದು ಗಿಡವನ್ನು ದತ್ತು ತೆಗೆದುಕೊಂಡು ಅದರ ಪಾಲನೆ ಪೋಷಣೆ ಮಾಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಬೇಕು.**

**– ಡಾ. ಡಿ.ವಿ. ಪರಮಶಿವಮೂರ್ತಿ,**
ಕುಲಪತಿ, ಕನ್ನಡ ವಿವಿ. ಹಂಪಿ.

■ **ಹಂಪಿ ಟೈಮ್ಸ್ ಹೊಸಪೇಟೆ**

ಪರಿಸರ ಸಂರಕ್ಷಣೆ ಕೇವಲ ಅರಣ್ಯ ಇಲಾಖೆಗೆ ಸೀಮಿತವಾಗಿಲ್ಲ, ಅದು ಪ್ರತಿಯೊಬ್ಬ ನಾಗರಿಕರ ಮೂಲಭೂತ ಕರ್ತವ್ಯವಾಗಿದೆ ಎಂದು ಅಟಲ್ ಬಿಹಾರಿ ವಾಜಪೇಯಿ ಮೃಗಾಲಯದ ಉಪವಲಯ ಅರಣ್ಯ ಅಧಿಕಾರಿಗಳಾದ ಭೀಮರಾಯ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಅನನ್ಯ ಬಾಲಕರ ವಸತಿ ನಿಲಯದಲ್ಲಿ ಮಂಗಳವಾರ ವಿಶ್ವ ಪರಿಸರ ದಿನಾಚರಣೆಯ ಹಸಿರು ಉತ್ಸವ ಅಂಗವಾಗಿ ಗಿಡ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಹವಾಮಾನ ವೈಪರೀತ್ಯದಿಂದ ಅನೇಕ ದುಷ್ಪರಿಣಾಮಗಳನ್ನು ಅನುಭವಿಸಲಾಗಿದ್ದು, ಇಂತಹ ಸಮಸ್ಯೆಗಳನ್ನು ನಾವು ಗಿಡ ಮರಗಳನ್ನು ಬೆಳಸುವ ಮೂಲಕ ನಿರ್ವಹಿಸಲು ಸಾಧ್ಯ ಎಂದರು. ನಮ್ಮ ಬಿಡುವಿನ ಸಮಯದಲ್ಲಿ ಗಿಡ ಮರಗಳನ್ನು ನೆಟ್ಟು ಅವುಗಳನ್ನು ಪಾಲನೆ ಪೋಷಣೆ ಮಾಡುವ ಜವಾಬ್ದಾರಿ, ಅವುಗಳ ಸಂರಕ್ಷಣೆ, ಜನಸಾಮಾನ್ಯರಿಗೆ ಪರಿಸರದ ಬಗ್ಗೆ ಕಾಳಜಿ ಅರಿವು ಮೂಡಿಸುವ ಹೊಣೆ ನಮ್ಮ ಮೇಲಿದೆ ಎಂದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಲತಾ ರೋಹಿಣಿ ಮಠ ಮಾತನಾಡಿ, ಗಿಡ ಮರಗಳನ್ನು ನೆಡುವುದರೊಂದಿಗೆ, ಅವುಗಳ ಪೋಷಣೆ ಬಹಳ ಮುಖ್ಯ. ನಾವು ಪ್ರಚಾರಗೋಸ್ಕರ ಕಾರ್ಯಕ್ರಮಗಳನ್ನು ಮಾಡದೆ ಗಿಡಮರಗಳನ್ನು ನಮ್ಮ ಮಕ್ಕಳಂತೆ ಪಾಲನೆ ಮಾಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅನನ್ಯ ಬಾಲಕರ ವಸತಿ ನಿಲಯದ ನಿಲಯಪಾಲಕರಾದ ಹನುಮಂತಪ್ಪ ಸಂಕನೂರು ಮಾತನಾಡಿ, ನಮ್ಮೆಲ್ಲರಿಗೆ ತಾಯಿ ಇಬ್ಬರಿದ್ದು, ಒಂದು ಜನ್ಮ ನೀಡಿದವರು, ಇನ್ನೊಬ್ಬರು ನಮ್ಮ ಸುತ್ತಮುತ್ತಲಿನ ಪರಿಸರ. ಜನ್ಮ ನೀಡಿದಾಕಿಗೆ ಮಾತು ಬರುತ್ತದೆ ಅವರು ಏನಾದರೂ ಬೇಕಾದರೆ ಕೇಳುತ್ತಾರೆ. ಆದರೆ ಪರಿಸರ ಕೇಳುವುದಿಲ್ಲ ಇದನ್ನು ಅರಿತುಕೊಂಡು ನಾವು ಜವಾಬ್ದಾರಿಯುತವಾಗಿ ಗಿಡ ಮರಗಳಿಗೆ ನೀರುಣಿಸುವುದು ಪೋಷಕಾಂಶ ನೀಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಇದರಿಂದ ಉತ್ತಮ ಆರೋಗ್ಯ ಕೂಡ ಸಿಗುತ್ತದೆ ಎಂದು ತಿಳಿಸಿದರು.

ಚರಿತ್ರೆ ವಿಭಾಗದ ಪ್ರಾಧ್ಯಾಪಕರಾದ ಡಾ. ಎನ್. ಚಿನ್ನಸ್ವಾಮಿ ಸೋಸಲೆ, ತಾಂತ್ರಿಕ ವಿಭಾಗದ ಮುಖ್ಯಸ್ಥರಾದ ಚಂದ್ರಶೇಖರ್, ಪ್ರಸಾರಾಂಗ ಸಹಾಯಕ ನಿರ್ದೇಶಕರಾದ ಎಂ.ಎಂ.ಶಿವಪ್ರಕಾಶ್, ತೋಟಗಾರಿಕೆ ವಿಭಾಗದ ಸಹಾಯಕ ತೋಟಗಾರಿಕೆ ಅಧಿಕಾರಿಯಾದ ಬೀರಪ್ಪ, ಸಮಾಜ ಕಲ್ಯಾಣ ಇಲಾಖೆಯ ಪ್ರಥಮ ದರ್ಜೆ ಸಹಾಯಕರಾದ ಕೊಟ್ರೇಶ್, ನಿಲಯ ಪಾಲಕರಾದ ಸಂಗಮೇಶ್ ಉಪಸ್ಥಿತರಿದ್ದರು. ಸಂಶೋಧನ ವಿದ್ಯಾರ್ಥಿಯಾದ ಅನಿಲ್ ಕುಮಾರ್, ಸಿದ್ದರಾಮಪ್ಪ, ದೊಡ್ಡಬಸಪ್ಪ ಎ.ಕೆ ನಿರ್ವಹಿಸಿದರು.

## ನಗರಸಭೆಯಿಂದ ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನ ಕೇಂದ್ರ ಪುರಸ್ಕೃತ ಯೋಜನೆಯಾಡಿ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ–ನಲ್ಮ್) ಯೋಜನೆ ಅಡಿಯಲ್ಲಿ ಉಪಘಟಕವಾದ ಉದ್ಯೋಗ (ಶೇ.7ಮೇಲೆ ಬಡ್ಡಿ ಸಹಾಯಧನ) ಸ್ವಯಂ ಉದ್ಯೋಗ ಕಾರ್ಯಕ್ರಮ (ಗುಂಪು) ಹಾಗೂ ಸ್ವ–ಸಹಾಯ ಗುಂಪುಗಳ ರಚನೆಯ ಕಾರ್ಯಕ್ರಮಕ್ಕೆ ನಗರಸಭೆ ವ್ಯಾಪ್ತಿಯೊಳಗಿನ ಪ್ರದೇಶದಲ್ಲಿರುವ ಬಡತನ ರೇಖೆಗಿಂತ ಕೆಳಗಿರುವ ನಿರುದ್ಯೋಗಿ ಮಹಿಳಾ ಮತ್ತು ಪುರುಷ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಇಚ್ಛೆಯುಳ್ಳ ಬಿಪಿಎಲ್ ಫಲಾನುಭವಿಗಳು ನಿಗದಿತ ಅರ್ಜಿ ನಮೂನೆಗಳನ್ನು ಜೂನ್ 25ರೊಳಗಾಗಿ ಅರ್ಜಿಗಳನ್ನು ಭರ್ತಿ ಮಾಡಿ ಪ್ರಸ್ತುತ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಯೋಜನಾ ವರದಿ, ರೇಷನ್ ಕಾರ್ಡ್, ಆಧಾರ್ ಕಾರ್ಡ್, ಚುನಾವಣೆ ಗುರುತಿನ ಚೀಟಿ, ಕೈಗೊಳ್ಳುವ ಉದ್ಯೋಗದ ಬಗ್ಗೆ ತರಬೇತಿಗೊಂಡ ಪ್ರಮಾಣ ಪತ್ರ, ವಿದ್ಯಾರ್ಹತೆ ಪ್ರಮಾಣ ಪತ್ರ, ಇತ್ತೀಚಿನ 2 ಭಾವಚಿತ್ರ, 20 ರೂ. ಛಾಪಾ ಕಾಗದರ ಮೇಲೆ ನಲ್ಮ್ ಯೋಜನೆಯ ಘೋಷಣಾ ಪ್ರಮಾಣ ಪತ್ರವನ್ನು ನೋಟರಿಯಿಂದ ದೃಢೀಕರಿಸಿದ ಪತ್ರಿ ಮತ್ತು ವೈಯಕ್ತಿಕ ಉಳಿತಾಯ ಖಾತೆಯ ಬ್ಯಾಂಕ್ ಪಾಸ್ ಬುಕ್ ಪ್ರತಿಯ ಎಲ್ಲಾ ದೃಢಿಕೃತ ದಾಖಲೆಗಳೊಂದಿಗೆ ನಗರಸಭೆ ಕಾರ್ಯಾಲಯಕ್ಕೆ ಖುದ್ದಾಗಿ ಅರ್ಜಿ ಸಲ್ಲಿಸಲು ಸೂಚಿಸಿದೆ. ಅರ್ಜಿಯೊಂದಿಗೆ ಅಭ್ಯರ್ಥಿಗಳು ಕಡ್ಡಾಯವಾಗಿ ತಮ್ಮ ವಾರ್ಡ್‌ವಾರು ನಿಗದಿಪಡಿಸಿದೆ ಸೇವಾ ವಲಯದ ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ಪ್ರತಿ ಲಗತ್ತಿಸಬೇಕು. ವಾರ್ಡ್‌ವಾರು ನಿಗದಿಪಡಿಸಿದ ಸೇವಾ ವಲಯದ ಬ್ಯಾಂಕ್‌ಗಳಿಗೆ ಮಾತ್ರ ಅರ್ಜಿಗಳನ್ನು ಕಳುಹಿಸಲಾವುದು. ಹೆಚ್ಚಿನ ಮಾಹಿತಿಗಾಗಿ ನಗರಸಭೆಯ ಸಿ.ಎ.ಓ (ಸಮುದಾಯ ವ್ಯವಹಾರ ಅಧಿಕಾರಿ) ಅವರನ್ನು ಸಂಪರ್ಕಿಸಬಹುದಾಗಿದೆ ಎಂದು ನಗರಸಭೆಯ ಪೌರಾಯುಕ್ತರು ತಿಳಿಸಿದ್ದಾರೆ.

**ಅರ್ಹತೆ: ನಗರಸಭೆ ವ್ಯಾಪ್ತಿಯಲ್ಲಿ ವಾಸವಾಗಿದ್ದು, ಕುಟುಂಬದ ವಾರ್ಷಿಕ ಆದಾಯ 23,214 ರೂ. ಹೊಂದಿರುವ ಪುರುಷ ಮಹಿಳಾ ಫಲಾನುಭವಿಗಳಾಗಿದ್ದು 18 ರಿಂದ 45 ವರ್ಷದ ವಯೋಮಾನದ ಫಲಾನುಭವಿಗಳಾಗಿರಬೇಕು, ಸ್ವಯಂ ಉದ್ಯೋಗ ಮಾಡಲು ಆಸಕ್ತಿ ಇರಬೇಕು. ಯಾವುದೇ ಬ್ಯಾಂಕ್‌ನಲ್ಲಿ ಸಾಲ ಹೊಂದಿರಬಾರದು. ಮಂಜೂರಾದ ಸಾಲವನ್ನು ಕಡ್ಡಾಯವಾಗಿ ಮೂರು ವರ್ಷದಲ್ಲಿ ಪಾವತಿಸುವ ಅರ್ಹತೆ ಹೊಂದಿರತಕ್ಕದ್ದು.**

## ವಿಶೇಷ ಚೇತನರಿಗೆ ಸಾಧನ ಸಲಕರಣೆ ವಿತರಣೆ: ಡಾ.ಬಸರೆಡ್ಡಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಅಲಿಂಕೋ ಸಂಸ್ಥೆ ವತಿಯಿಂದ ಪ್ರತಿ ವರ್ಷ ಮೌಲ್ಯ ಮಾಪನ ಶಿಬಿರಗಳ ಮೂಲಕ ವಿಶೇಷಚೇತನರು ಹಾಗೂ ಹಿರಿಯ ನಾಗರಿಕರಿಗೆ ಅವಶ್ಯವಿರುವ ಸಾಧನ ಸಲಕರಣೆಗಳನ್ನು ಉಚಿತವಾಗಿ ವಿತರಣೆ ಮಾಡಲಾಗುತ್ತಿದ್ದು, ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಜೂ.12 ರಿಂದ 18 ರವರೆಗೂ ಮೌಲ್ಯ ಮಾಪನ ಶಿಬಿರಗಳು ನಡೆಯಲಿವೆ. ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಬಸರೆಡ್ಡಿ ಅವರು ಹೇಳಿದರು.

ಕೇಂದ್ರ ಸರ್ಕಾರದ ಆಡಿಪ್ ಮತ್ತು ರಾಷ್ಟ್ರೀಯ ವಯೋಶ್ರೀ ಯೋಜನೆಯಡಿಯ ಅಲಿಂಕೋ ಸಂಸ್ಥೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಜಿಲ್ಲಾ ಪುನರ್ವಸತಿ ಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರಿಗೆ ಅಗತ್ಯವಿರುವ ಸಾಧನ ಸಲಕರಣೆಗಳನ್ನು ವಿತರಿಸಲು ಮಂಗಳವಾರ ಜಿಲ್ಲಾ ಆಸ್ಪತ್ರೆಯಲ್ಲಿ ಏರ್ಪಡಿಸಿದ್ದ ಮೌಲ್ಯ ಮಾಪನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯ ಎಲ್ಲಾ ವಿಶೇಷಚೇತನರು ಹಾಗೂ ಹಿರಿಯ ನಾಗರಿಕರು ಮೌಲ್ಯ ಮಾಪನ ಶಿಬಿರಗಳಲ್ಲಿ ಭಾಗವಹಿಸಿ ವೈದ್ಯಾಧಿಕಾರಿಗಳ ಮೂಲಕ ತಮ್ಮ ಹೆಸರನ್ನು ನೋಂದಾಯಿಸಿದಲ್ಲಿ ತಮಗೆ ಅವಶ್ಯವಿರುವ ಸಾಧನ ಸಲಕರಣೆಗಳನ್ನು ನೀಡಲಾಗುತ್ತದೆ. ಜಿಲ್ಲೆಯ ಎಲ್ಲಾ ವಿಶೇಷಚೇತನರು ಹಾಗೂ ಹಿರಿಯ ನಾಗರಿಕರು ಈ ಸೌಲಭ್ಯಗಳನ್ನು ಸದುಪಯೋಗಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ. ರಮೇಶ್‌ಬಾಬು, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರ ಕುಮಾರ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಹೆಚ್. ಗೋವಿಂದಪ್ಪ, ಜಿಲ್ಲಾ ಆಸ್ಪತ್ರೆಯ ಅಧೀಕ್ಷಕಿ ವಿಮಾಲಾಕ್ಷಿ, ಕಿವಿ, ಮೂಗು, ಗಂಟಲು ತಜ್ಞರಾದ ಡಾ.ಅನಿಲ್ ರೆಡ್ಡಿ, ಡಾ.ವಿನಯ್, ಆಡಿಯೋಲಾಜಿಸ್ಟ್ ಡಾ.ವರ್ಷ, ಮಕ್ಕಳ ತಜ್ಞೆ ಡಾ.ತೇಜಾ, ಫಿಜಿಯೋಥೆರಪಿಸ್ಟ್ ಡಾ.ಕೃಷ್ಣ, ಡಾ.ರೂಪೇಶ್ ಕುಮಾರ್, ಡಾ.ನಿಹಾಲ್ ಕುಮಾರ್, ಅವಿನಾಶ್, ನಿತೀಶ್, ಕಿಷನ್, ಸ್ಪೀಚ್ ಥೆರಪೀಸ್ಟ್ ಜ್ಯೋಷಿ, ಜಿಲ್ಲಾ ಪುನರ್ವಸತಿ ಕೇಂದ್ರದ ಸಂಯೋಜಕರಾದ ನಾಗೇಂದ್ರ ಮತ್ತು ನಾರಯಣನಾಯ್ಕ್, ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತೆ ಸಿ.ರಾಣಿ ಮತ್ತು ನಗರ ಪುನರ್ವಸತಿ ಕಾರ್ಯಕರ್ತರು ಸೇರಿದಂತೆ ಸಿಬ್ಬಂದಿಗಳು ಹಾಗೂ ಬಳ್ಳಾರಿ ನಗರದ ವಿಕಲಚೇತನರು ಹಾಗೂ ಹಿರಿಯ ನಾಗರಿಕರು ಉಪಸ್ಥಿತರಿದ್ದರು.

## ಚೆಳ್ಳಗುರ್ಕಿ ಎರ್ರಿಸ್ವಾಮಿ ಜಾತ್ರಾ ಮಹೋತ್ಸವ ಉಚಿತ ರಕ್ತದಾನ ಶಿಬಿರ: ಡಿಎಚ್‌ಒ ಪರಿಶೀಲನೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ತಾಲ್ಲೂಕಿನ ಚೆಳ್ಳಗುರ್ಕಿ ಗ್ರಾಮದ ಶ್ರೀ ಎರ್ರಿಸ್ವಾಮಿ ಜಾತ್ರಾ ಮಹೋತ್ಸವ ಜೂ.12, 13 ರಂದು ಜರುಗಲಿದೆ. ಸ್ವಯಂ ಪ್ರೇರಿತ ಉಚಿತ ರಕ್ತದಾನ ಶಿಬಿರವನ್ನು ಚೆಳ್ಳಗುರ್ಕಿ ಗ್ರಾಮದಲ್ಲಿ 2 ದಿನಗಳ ಕಾಲ ಏರ್ಪಡಿಸಲಾಗಿದ್ದು, ಜಾತ್ರೆಗೆ ಆಗಮಿಸುವ 18 ವರ್ಷ ಮೇಲ್ಪಟ್ಟ ಆರೋಗ್ಯವಂತ ಪುರುಷ ಮತ್ತು ಮಹಿಳಾ ಭಕ್ತಾಧಿಗಳು ರಕ್ತದಾನ ಮಾಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಮನವಿ ಮಾಡಿದರು.

ಮಂಗಳವಾರದಂದು ಚೆಳ್ಳಗುರ್ಕಿ ಗ್ರಾಮದ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಅಗತ್ಯ ಸಿದ್ಧತೆಗಳ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಕನಿಷ್ಟ 400 ಯುನಿಟ್ ರಕ್ತ ಸಂಗ್ರಹಿಸುವ ಗುರಿ ಹೊಂದಿದ್ದು, ಈ ಮೂಲಕ ರಕ್ತದ ಕೊರತೆಯನ್ನು ನೀಗಿಸಲು ಪ್ರತಿಯೊಬ್ಬರೂ ಸಹಕಾರ ನೀಡಬೇಕೆಂದು ಕೋರಿದರು.

ರಕ್ತಹೀನತೆಯಿಂದ ಬಳಲುವ ಗರ್ಭಿಣಿ ಸ್ತ್ರೀಯರಿಗೆ, ಶಸ್ತ್ರಚಿಕಿತ್ಸಾ ಹೆರಿಗೆ ವೇಳೆ ಮತ್ತು ಅಪಘಾತ, ತುರ್ತು ಶಸ್ತ್ರಚಿಕಿತ್ಸೆಗಳ ಸಂದರ್ಭದಲ್ಲಿ ಹಾಗೂ ಕ್ಯಾನ್ಸರ್ ರೋಗಿಗಳಿಗೆ ಥ್ಯಾಲಿಸೀಮಿಯಾ, ಹಿಮೋಫಿಲಿಯಾ ಮುಂತಾದ ರೋಗಿಗಳ ಜೀವವನ್ನು ಉಳಿಸುವ ಪುಣ್ಯದ ಕೆಲಸಕ್ಕೆ ಪ್ರತಿಯೊಬ್ಬರೂ ಕೈ ಜೋಡಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಮಲೇರಿಯ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ, ಚೆಳ್ಳಗುರ್ಕಿ ಪ್ರಾಥಮಿಕ ಆರೋಗ್ಯ ಕೇಂದ್ರ ಆಡಳಿತ ವೈದ್ಯಾಧಿಕಾರಿ ಡಾ.ಕಾವ್ಯಶ್ರೀ, ಮತ್ತು ಸಿಬ್ಬಂದಿ ಇತರರು ಉಪಸ್ಥಿತರಿದ್ದರು.


ಕನ್ನಡ ಟ್ಯೂಷನ್
KANNADA TUITION
Kannada Tuition Are Done Here
Kannada Language Tuition for 10th , PUC State, CBSE and ICSE Syllabus are done here. with Individual attention, helping out students with their assignments Betterment of Their Academic Performance
*****
For More Details
SUMALATHA B.M
94491 90966
N.C.Colony , HOSAPETE VIJAYANAGARA

S.M.TRADERS & SERVICES
ATLAS COPCO COMPRESSORS, HOSEPIPE, DRILL RODS, SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201

ಬೇಕಾಗಿದ್ದಾರೆ
Marketing Executive
> Any Graduate Can apply
> Good communication & Convincing skills
> Ability to work independently
> Freeshers are Invited
GOAL
STRATEGY
PLAN
Attractive remuneration and Excellent career development opportunities wait to the right candidate
Job Location: HOSAPETE - VIJAYANAGARA Dist.
94825 99089
94486 33038

ಮಕ್ಕಳ ಜ್ಞಾನ ವಿಕಾಸಕ್ಕೆ ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ


**ಮೈಕ್ರೋ ನ್ಯೂಸ್**

### ಸರ್ಕಾರಿ ಆದರ್ಶ ವಿದ್ಯಾಲಯದ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೂಡ್ಲಿಗಿ:**
ಪಟ್ಟಣದ ಹೊರವಲಯದ ಅಮರ ದೇವರ ಗುಡ್ಡದ ಬಳಿಯ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ 7,8 ಮತ್ತು 9 ನೇ ತರಗತಿಯಲ್ಲಿ ಖಾಲಿ ಉಳಿದಿರುವ ಸ್ಥಾನಗಳಿಗೆ ದಾಖಲಾತಿ ಮಾಡಿಕೊಳ್ಳಲಾಗುವುದು ಎಂದು ಮುಖ್ಯ ಶಿಕ್ಷಕ ಎಚ್.ಲಕ್ಷ್ಮಣ ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪ್ರಸಕ್ತ ಸಾಲಿನಲ್ಲಿ 7 ನೇ ವರ್ಗಕ್ಕೆ 18, 8 ನೇ ವರ್ಗಕ್ಕೆ 11 ಮತ್ತು 9 ನೇ ವರ್ಗಕ್ಕೆ 20 ಸ್ಥಾನಗಳು ಲಭ್ಯವಿದ್ದು, ಖಾಲಿ ಉಳಿದಿರುವ ಸ್ಥಾನಗಳಿಗೆ ಮೀಸಲಾತಿ ಅನ್ವಯ ಭರ್ತಿ ಮಾಡಲು ಸಾಮಾನ್ಯ ಪ್ರವೇಶ ಪರೀಕ್ಷೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆಗಳು ಆದರ್ಶ ಸರ್ಕಾರಿ ವಿದ್ಯಾಲಯದ ಕಚೇರಿಯಲ್ಲಿ ಪಡೆದು ಭರ್ತಿ ಮಾಡಿ ಅದೇ ಕಚೇರಿಯಲ್ಲಿ ಇದೇ 21 ರ ಒಳಗೆ ಭರ್ತಿ ಮಾಡಿದ ಅರ್ಜಿ ಸಲ್ಲಿಸಬೇಕು. ನಂತರ ಇದೇ 26 ರಂದು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಸದರಿ ಶಾಲೆಯಲ್ಲಿ ನಡೆಸಲಾಗುವುದು ಎಂದು ಮುಖ್ಯ ಶಿಕ್ಷಕ ಎಚ್.ಲಕ್ಷ್ಮಣ ಸಿಂಗ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಈ ಮೊಬೈಲ್ ಸಂಖ್ಯೆಗೆ ಕರೆಮಾಡಿ 9449560057 ತಿಳಿಸಲು ಕೋರಿದೆ.


HAMPI TIMES VIJAYANAGARA
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ

ಕನಿಷ್ಟ ವೆಚ್ಚ ಗರಿಷ್ಠ ಪ್ರಚಾರ
Minimum Cost Maximum Promotion

Advertising is a marketing activity that can help you to reach out to potential customers and encourage them to buy your products or services.

increase customer reach
build customer awareness of your business and brand
promote the benefits of your products or services
communicate information about your business
increase sales and demand
gain an advantage over your competitors.

PUBLISH YOUR ADVERTISEMENT IN HAMPI TIMES DAILY NEWSPAPER
Minimum Cost Maximum Promotion

SCAN & READ HAMPI TIMES E-PAPER
ವಿಜಯನಗರ ಜಿಲ್ಲೆಯ ಹೆಮ್ಮೆ ಸ್ಥಳೀಯ ನಂ.1 ಕನ್ನಡ ದಿನಪತ್ರಿಕೆ ಹಂಪಿ ಟೈಮ್ಸ್ ಇ-ಪೇಪರ್ ವಿಶ್ವದ ವಿವಿಧೆಡೆ ಇರುವ
70000+
ಕನ್ನಡ ಓದುಗರ ಕೈಯಲ್ಲಿ...

☑ Discount Offers
☑ Good Creative Desgin
☑ Economical Ads Rates
☑ Combination Offers Available

CALL US NOW 94486 33038
www.hampitimes.com/epaper.hampitimes.com

Hampi Times E-Paper Daily Readers @
in India : Karnataka, Maharastra, Kerala, Telangana, Tamilnadu, Andrapradesh, Uttar Pradesh, Gujarat, Haryan, Odisha and other places.
international: United States - Sweden - United Kingdom, Canada

hampitimes@gmail.com
www.hampitimes.com
epaper.hampitimes.com

## ಬೆಳಕಿನ ಹಾದಿ

# ಮೂರ್ಖರು ಯಾರು?

■ ಆರ್.ಬಿ.ಗುರುಬಸವರಾಜ

ಒಂದು ಕಾಡಿನಲ್ಲಿ ಒಂದು ವಯಸ್ಸಾದ ಕಪ್ಪೆ ಇತ್ತು. ಕಡಿಮೆ ಬುದ್ಧಿವಂತಿಕೆಗಾಗಿ ಮೂರ್ಖ ಕಪ್ಪೆ ಎಂದು ಹೆಸರಾಗಿತ್ತು. ಅದು ಯಾವಾಗಲೂ ಮೂರ್ಖತನದಿಂದ ವರ್ತಿಸುತ್ತಿತ್ತು. ಎಲ್ಲರೂ ಅದನ್ನು ನೋಡಿ ನಗುತ್ತಿದ್ದರು. ಇತರೆ ಎಲ್ಲಾ ಪ್ರಾಣಿಗಳು ಅದನ್ನು ಮೂರ್ಖ ಮತ್ತು ನಿಷ್ಪ್ರಯೋಜಕ ಜೀವಿ ಎಂದು ಪರಿಗಣಿಸಿದರು. ತನ್ನ ಕಡಿಮೆ ಬುದ್ಧಿವಂತಿಕೆಯ ಹೊರತಾಗಿಯೂ, ಅದು ತುಂಬಾ ಕರುಣಾಮಯಿ ಮತ್ತು ಸಹಾನುಭೂತಿಯುಳ್ಳದ್ದು ಆಗಿತ್ತು.



ಆಗಾಗ್ಗೆ ಇತರರಿಗೆ ಸಹಾಯ ಮಾಡುತ್ತಿತ್ತು.

ಒಂದು ದಿನ ಕಾಡಿನ ರಾಜನು ಅಗ್ರ ಐದು ಬುದ್ಧಿವಂತ ಪ್ರಾಣಿಗಳ ನಡುವೆ ರಸಪ್ರಶ್ನೆ ಸ್ಪರ್ಧೆಯನ್ನು ನಡೆಸಲು ನಿರ್ಧರಿಸಿದನು. ಅದಕ್ಕಾಗಿ ರಾಜ್ಯದಲ್ಲಿರುವ ಎಲ್ಲಾ ಪ್ರಾಣಿಗಳನ್ನು ಆಹ್ವಾನಿಸಿದರು ಮತ್ತು ಬುದ್ಧಿವಂತಿಕೆಗೆ ಹೆಸರಾದ ಐದು ಸ್ಪರ್ಧಿಗಳನ್ನು ಆಯ್ಕೆ ಮಾಡಲು ಹೇಳಿದರು.

ಎಲ್ಲಾ ಪ್ರಾಣಿಗಳು ವೈಸ್ ಡಾಲ್ಫಿನ್‌ನ್ನು ಮೊದಲ ಸ್ಪರ್ಧಿಯಾಗಿ ಆಯ್ಕೆ ಮಾಡಿದವು. ಎರಡನೆಯದು ಸ್ಮಾರ್ಟ್ ಚಿಂಪಾಂಜಿ. ಮೂರನೆಯದು ಇಂಟೆಲಿಜೆಂಟ್ ತೋಳ. ನಾಲ್ಕನೆಯದು ಬ್ರಿಲಿಯಂಟ್ ಅಳಿಲು. ಐದನೆಯ ಸ್ಥಾನಕ್ಕೆ ಯಆರನ್ನು ಆಯ್ಕೆ ಮಾಡಬೇಕೆಂದು ಚರ್ಚೆ ನಡೆದಿತ್ತು. ಆಗ ಕೆಲವು ಪ್ರಾಣಿಗಳು ತಮಾಷೆಗೆ ವಯಸ್ಸಾದ ಕಪ್ಪೆಯ ಹೆಸರನ್ನು ಪ್ರಸ್ತಾಪಿಸಿದವು. ಕಪ್ಪೆಯ ಮೂರ್ಖತನವನ್ನು ಅಪಹಾಸ್ಯ ಮಾಡುವುದು ಅವುಗಳ ಉದ್ದೇಶವಾಗಿತ್ತು. ಉಳಿದ ಎಲ್ಲಾ ಪ್ರಾಣಿಗಳು ಐದನೆಯ ಸ್ಪರ್ಧಿಯಾಗಿ ಕಪ್ಪೆಯನ್ನು ಆಯ್ಕೆ ಮಾಡಿದವು.

ಐವರು ಸ್ಪರ್ಧಿಗಳು ಸಿದ್ಧವಾದಾಗ ರಾಜನು ಅಲ್ಲಿಗೆ ಬಂದನು. ರಸಪ್ರಶ್ನೆಯಲ್ಲಿ ಗೆದ್ದ ಪ್ರಾಣಿಗಳಿಗೆ ದೊಡ್ಡ ಮೊತ್ತದ ಬಹುಮಾನ ನೀಡುವುದಾಗಿ ಭರವಸೆ ನೀಡಿದನು. ಮುಂದುವರೆದು ಊದು ಸ್ಪರ್ಧಿಗಳಿಗೆ ಒಂದು ಪ್ರಶ್ನೆ ಕೇಳಿದನು.

'ಪ್ರಪಂಚದಲ್ಲಿ ಅತ್ಯಂತ ಬಲವಾಗಿ ಕಚ್ಚುವ ಸಸ್ತನಿ ಯಾವುದು?' ಎಂದನು.

ಎಲ್ಲಾ ಸ್ಪರ್ಧಿಗಳು ಭಯಂಕರವಾಗಿ ಗೊಂದಲಕ್ಕೊಳಗಾದವು. ತಲೆ ಕೆರೆದುಕೊಂಡವು, ಮೈ ಪರಚಿಕೊಂಡವು. ತಮಗೆ ತಿಳಿದುದನ್ನು ಹೇಳಿದವು. ಏನೇ ಆದರೂ ಯಾವ ಪ್ರಾಣಿಯೂ ಸರಿಯಾದ ಉತ್ತರ ಹೇಳಲಿಲ್ಲ. ಅನೇಕ ಬಾರಿ ಮರು ಪ್ರಯತ್ನಿಸಿದವು. ಆದರೆ ಪ್ರಯೋಜನವಾಗಲಿಲ್ಲ. ಅದುವರೆಗೂ ಬಾಯಿ ಬಿಡದ ಕಪ್ಪೆ 'ಹಿಪಪಾಟಮಸ್!' (ನೀರಾನೆ) ಎಂದು ತನ್ನ ಉತ್ತರ ಹೇಳಿತು. ಇದನ್ನು ಕೇಳಿದ ಎಲ್ಲಾ ಪ್ರಾಣಿಗಳು ಗೊಳ್ಳೆಂದು ನಕ್ಕವು.

ಆದರೆ ರಾಜನು ಮಾತ್ರ ಸಂತೋಷದಿಂದ ನಕ್ಕನು. 'ವಾವ್, ನೀನ್ನ ಉತ್ತರ ಸರಿಯಾಗಿದೆ. ಸ್ಪರ್ಧೆಯಲ್ಲಿ ನೀನು ಗೆದ್ದಿದ್ದೀಯ!' ಎಂದು ರಾಜನು ವಿಜೇತರನ್ನು ಘೋಷಿಸಿದನು.

ಎಲ್ಲಾ ಪ್ರಾಣಿಗಳಿಗೆ ಆಶ್ಚರ್ಯವಾಯಿತು ಮತ್ತು ಅದನ್ನು ನಂಬಲಾಗಲಿಲ್ಲ. ಆದರೆ ಒಪ್ಪಿಕೊಳ್ಳುವುದು ಅನಿವಾರ್ಯವಾಗಿತ್ತು. ಕಪ್ಪೆಯನ್ನು ಕೀಳಾಗಿ ನೋಡುತ್ತಿದ್ದ ಪ್ರಾಣಿಗಳೆಲ್ಲ ನಾಚಿಕೆಪಟ್ಟುಕೊಂಡವು. ತಮ್ಮನ್ನು ತಾವು ತಪ್ಪಿತಸ್ಥರೆಂದು ಭಾವಿಸಿ ಕಪ್ಪೆಯ ಬಳಿ ಕ್ಷಮೆ ಕೇಳಿದವು.

ನಮ್ಮ ಬದುಕಿನಲ್ಲೂ ಇಂತಹ ಅನೇಕ ಜನರಿರುತ್ತಾರೆ. ಯಾರೇ ಆಗಿದ್ದರೂ ಅವರನ್ನು ಅಪಹಾಸ್ಯ ಮಾಡಬಾರದು ಮತ್ತು ಕೀಳಾಗಿ ಕಾಣಬಾರದು. ನಾವು ಎಲ್ಲವನ್ನೂ ನೋಡಿದ್ದೇವೆ, ನಮಗೆ ಎಲ್ಲವೂ ತಿಳಿದಿದೆ ಎಂದು ನಾವು ಭಾವಿಸಬಹುದು. ಆದರೆ ಅದೃಷ್ಟ ಮತ್ತು ಅವಕಾಶವು ವ್ಯಕ್ತಿಯ ಜೀವನವನ್ನು ಶಾಶ್ವತವಾಗಿ ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿದೆ ಎಂಬುದನ್ನು ಅರಿಯಬೇಕಿದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಪರಿಮಳಕ್ಕನ ಪರಿಸರ ದಿನಾಚರಣೆ

ಇಳೆಯಿಂದ ಮೊಳಕೆಯೊಗೆಯೊಂದು ತಮಟೆಗಳಿಲ್ಲ
ಫಲ ಮಾಗುವಂದು ತುತ್ತೂರಿ ದನಿಯಿಲ್ಲ
ಬೆಳಕಿವ ಸೂರ್ಯ ಚಂದ್ರರದೊಂದು ಸದ್ದಿಲ್ಲ
ಹೊಲಿ ನಿನ್ನ ತುಟಿಗಳನ್ನು ಮಂಕುತಿಮ್ಮ...

ಆಹಾಹಾ.... ಡಿ. ವಿ. ಜಿ ಅವರ ಕಗ್ಗದ ಒಂದೊಂದು ಪದಾನು ಒಂದೊಂದು ವಿಶೇಷವಾದುದನ್ನೇ ಹೇಳುತ್ತದೆ. ಹೌದಲ್ವಾ? ಈ ಪ್ರಕೃತಿಯ ಪ್ರತಿ ಜೀವಿಯು ತನಗೆ ಆ ಪರಮಾತ್ಮ ವಹಿಸಿದ ಜವಾಬ್ದಾರಿಯನ್ನು ಕರ್ತವ್ಯವನ್ನು ಎಷ್ಟು ಅಚ್ಚುಕಟ್ಟಾಗಿ ನಿರ್ವಹಿಸುತ್ತಾ ಇದೆ. ಆದರೆ ಅವು ಯಾವುವು ಕೂಡ ತಮ್ಮ ಬಗ್ಗೆ ಎಲ್ಲೂ ಹೇಳ್ಕೊಂಡು ಅಡ್ಡಾಡ್ತಾ ಇಲ್ಲ. ಆದರೆ ಬುದ್ಧಿವಂತ, ಮಾತಾಡಬಲ್ಲ, ಯೋಚಿಸಬಲ್ಲ, ಆವಿಷ್ಕರಿಸಬಲ್ಲ ಏಕೈಕ ಜೀವಿ, ಮಾನವ ಇವತ್ತು ತಾನು ಮಾಡುವ ಪ್ರತಿಯೊಂದನ್ನೂ ಊರಿಗೆಲ್ಲ ಡಂಗೂರ ಹೊಡೆತ ಇದಾನೆ. ಅದು ತನ್ನ ಜವಾಬ್ದಾರಿ ಹಾಗೂ ಕರ್ತವ್ಯ ಅಂತ ಗೊತ್ತಿದ್ರೂ ಅದನ್ನ ಸಾರಿಕೋತ ಬರ್ತಾನೆ.

ಇದಕ್ಕೆ ನಮ್ಮ ಪರಿಮಳಕ್ಕ ಏನು ಹೊಸದಲ್ಲ. ಮೊನ್ನೆ ಸೀತಕ್ಕ, ಅವಳ ಮುಂದೆ "ಅಕ್ಕ.. ಜೂನ್ 5 ಕ್ಕೆ 'ವಿಶ್ವ ಪರಿಸರ ದಿನಾಚರಣೆ' ಇದೆ. ಏನು ಮಾಡಬೇಕು ಅಂದುಕೊಂಡಿದ್ದೀಯಾ" ಅಂತ ಕೇಳಿದ್ರು, ನಮ್ಮ ಪರಿಮಳ ಅಕ್ಕ "ಇನ್ನು ಯೋಚನೆ ಮಾಡಿಲ್ಲ ಕಣಮ್ಮ" ಅಂದ್ರು ಸೀತಕ್ಕ ಹೋದ ಮೇಲೆ ಪರಿಮಳಕ್ಕ ಪರಿಸರ ದಿನಾಚರಣೆ ಬಗ್ಗನೇ ಅದನ್ನ ಹೆಂಗೆ ಮಾಡುವುದು, ಅಂತ ಯೋಚಿಸ್ಕೊತ ಕೂತಳು. ಏನೋ ಮಸ್ತ್ ಪ್ಲಾನ್ ಮಾಡ್ಕೊಂಡು, ಅವತ್ತಿನ ಕೆಲಸ ಮುಗಿಸಿದ್ಲು.

ಜೂನ್ ಐದು ಬಂದೇ ಬಿಡ್ತು. ಸೀತಕ್ಕ, ಪರಿಮಳಕ್ಕ ಏನ್ ಮಾಡ್ತಾಳೆ ಅಂತ ನೋಡುವ ಆಸೆಯಿಂದ ಅವರ ಮನೆ ಹತ್ರ ಹೋದ್ಲು. ಅವಳು ಮಾಡೋ ಪರಿಸರ ದಿನಾಚರಣೆಯೊಳಗ ತಾನೂ ಸೇರ್ಕೋಳೋಣ ಅನ್ನೋದು ಅವರ ಆಸೆ.

ಪರಿಮಳಕ್ಕ ಚೆಂದಾಗಿ ರೆಡಿಯಾಗಿ, ಪರಿಸರ ದಿನಾಚರಣೆ ಆಚರಿಸಲೇಬೇಕು ಅಂತ ಹೊರಗೆ ಹೊರಟರು. ಜೊತೆಗೆ ಫೋನ್ ತಗೊಂಡು ಹೋಗೋದು ಮರೆಯಲಿಲ್ಲ ನೋಡ್ರಿ... ಅವರು ಮೊದಲು ಹೋಗಿದ್ದು ದೇವಸ್ಥಾನಕ್ಕೆ, "ದೇವಸ್ಥಾನದ ಸುತ್ತ ಇದ್ದ ಕಸನ ಕ್ಲೀನ್ ಮಾಡೋಣ ಅಂತ ಸೀತಕ್ಕ.." ಅಂತ ಕಸಬರಗಿ ಹಿಡಿದು ಹಂಗೆ ಗುಡಿಸೋ ತರಾನೇ ನಿಂತ್ರು, ಇವಾಗ ಸೀತಕ್ಕನ ಕೆಲಸ, ಫೋಟೋ ತೆಗೆಯೋದು, ಸೋಶಿಯಲ್ ಮೀಡಿಯಾದೊಳಗ ಅಪ್ಲೋಡ್ ಮಾಡೋದು.



ಸುಜಾತ ಗಿಡ್ಡಪ್ಪಗೌಡ್ರು
ಹೊಸಪೇಟೆ

Hampi Times E-paper
SCAN AND READ

ನೆಕ್ಸ್ಟ್ ಅವರು ಹೋಗಿದ್ದು ಊರ ಮುಂದೆ ಇದ್ದ ನೀರಿನ ಟ್ಯಾಂಕ್ ಹತ್ತಿರ. ಅಲ್ಲಿ ನಲ್ಲಿ ಸರಿ ಇಲ್ದೆ ನೀರು ಸೋರಿ ಸೋರಿ ಎಲ್ಲಾ ಜೌಗು ಹತ್ತಿದಾಂಗ ಇತ್ತು. ಅದನ್ನ ಕ್ಲೀನ್ ಮಾಡೋ ತರ ಫೋಟೋ ತೆಗೆಸಿಕೊಳ್ಳೋಕೆ ಹೋದರು, ಹಂಗೇ ಸ್ವಲ್ಪ ಜಾರದಂಗಾತು ಅಂತ, ಅಲ್ಲಿಂದ ಕಾಲ್ ಕಿತ್ರು..

ಸೀತಕ್ಕಾಗ ಇದೇನು ಬರೆ ಫೋಟೋಕ್ಕ ಪೋಜು ಕೊಡ್ತಾಳಲ್ಲ ಅಂತ ಯೊಚ್ನೆ ಬಂತು. ಪರಿಮಳಕ್ಕ ಯಾರಿಗೋ ಕಾಯ್ತಾ ಇರೋದು ಕಾಣ್ತು. "ಯಾರಿಗೆ ಪರಿಮಳಕ್ಕ ಕಾಯ್ತಾ ಇದ್ದೀಯ" ಅಂತ ಸೀತಕ್ಕ ಕೇಳಿದಾಗ "ಏನಿಲ್ಲ.. ನಿಂಗಣ್ಣನಿಗೆ ಒಂದು ಚಲೋ ಗಿಡ ತಗೊಂಡು ಬಾ.. ಇಲ್ಲೇ ದೇವಸ್ಥಾನದ ಮುಂದಿನ ರಸ್ತೆ ಪಕ್ಕಕ್ಕ ಅದನ್ನು ನೆಡೋಣ ಅಂತ. ಅದಕ್ಕೆ ಸ್ವಲ್ಪ ಗುಂಡಿನೂ ತೆಗೆದು ರೆಡಿ ಮಾಡು ಅಂದಿದ್ದೆ. ಗುಂಡಿ ಏನೋ ತೆಗೆದಾನ. ಆದರೆ ಅವನೇ ಕಾಣ್ತಾ ಇಲ್ವಲ್ಲ ಅಂತ ನೋಡ್ತಾ ಇದ್ದೆ." ಅಂದ್ರು. ಅಷ್ಟರಲ್ಲಿ ನಿಂಗಣ್ಣ ಒಂದು ಗಿಡ ಹಿಡ್ಕೊಂಡು ಓಡೋಡಿ ಬಂದ. ಸೀತಕ್ಕಾಗ ಈಗ ಪರಿಮಳಕ್ಕ ಈ ಗಿಡಾನ ಪೂರ್ತಿ ನೆಡ್ತಾಳೋ.. ಅಥವಾ ಹಂಗೆ ಪೋಜು ಕೊಡ್ತಾಳೋ ಅನ್ನೋ ಕುತೂಹಲ. ನೋಡೋಣ ಅಂತಂದು ಫೋನ್ ಕ್ಯಾಮೆರಾ ಆನ್ ಮಾಡಿ ರೆಡಿ ಆದ್ಲು. ಈ ಸಲ ಪರಿಮಳಕ್ಕ ಗುಂಡಿಯೊಳಗ ಗಿಡಾನ ಇಟ್ಟು, ಅದರ ಸುತ್ತ ಚೆಂದಾಗಿ ಮಣ್ಣು ಹಾಕಿ, ಒಂದು ಕೊಡ ನೀರು ಹಾಕಿ, ಖುಷಿಯಿಂದ ನೋಡಿದಳು. ಇವೆಲ್ಲಾವನ್ನೂ ಫೋಟೋ ತೆಗೀತಾ ಇದ್ದ ಸೀತಕ್ಕ ಸೋಷಿಯಲ್ ಮೀಡಿಯಾದೊಳಗ ಅಪ್ಲೋಡ್ ಮಾಡಿ ಹಾಕ್ತಾನೇ ಇದ್ಲು.

ಎಲ್ಲಾ ಮುಗಿದ ಮೇಲೆ ನಮ್ಮ ಪರಿಮಳಕ್ಕ "ತಾರೇ ಫೋನ್, ನೋಡೋಣ. ಎಷ್ಟು ಲೈಕ್, ಕಮೆಂಟ್ ಬಂದಾವೂ ಅಂದು ಫೋನ್ ತಗೊಂಡ್ಲು. ಅವಳ ಮುಖ ಅರಳಿದ ಮಲ್ಲಿಗೆ ತರ ಚಂದ ಕಾಣಾಕ ಹತ್ತಿತ್ತು. 'ಅಯ್ಯೋ... ಅಯ್ಯೋ... ಸೀತಕ್ಕ, ನೋಡಿಲ್ಲಿ, ಎಷ್ಟು ಲೈಕ್ ಬಂದಾವೂ... ಎಂತೆಂತಾ ದೊಡ್ಡ ದೊಡ್ಡ ಮಂದಿ ಕಮೆಂಟ್ ಮಾಡ್ಯಾರ... ನನ್ನ ಕೆಲ್ಸ ಮೆಚ್ಚಿ ಎಂತೆಂತಾ ಎಮೋಜಿ ಕಳ್ಸ್ಯಾರ.... ನೋಡಿಲ್ಲಿ' ಅಂತ ಹಿರಿಹಿರಿ ಹಿಗ್ಗಿ ಹೀರೆಕಾಯಿ ಆಗಿದ್ಲು... ಸೀತಕ್ಕಗ ಮಾತ್ರ ಗೊತ್ತಿತ್ತು. .. ಅವಳ ಪರಿಸರ ದಿನಾಚರಣೆ ಎಷ್ಟು ಚಂದಕ್ಕ ನಡೆದಿತ್ತು ಅಂತ... ಬರೀ ಫೋಟೋ ಪೋಸ್ ಕೊಟ್ಟು, ಪರಿಸರ ದಿನಾಚರಣೆ ಆಚರಿಸಿದ್ಲು... ನಾನಂತೂ ಇನ್ಮೇಲೆ ಇವಳ ಜೊತೆ ಇಂಥವೆಲ್ಲ ಮಾಡಲ್ಲವ್ವ.. ಇದೆಂತಾ ಕರ್ಮ.. ಚಂದಾಗ ನಮ್ಮ ಮನೆ ತಾವ ಸ್ವಚ್ಛ ಮಾಡಿ, ಮನೆ ಮುಂದೆ ಪಂಚಾಯತಿಯವರು ನೆಟ್ಟಿರೋ ಗಿಡಕ್ಕೆ ನೀರು ಹಾಕಿ, ಬೆಳೆಸ್ಕೊಂತ ಇದ್ರೆ, ಅದ ಮುಂದ ನಮ್ಮ ಮನೆಗೆ ನೆರಳು ಕೊಡತೈತಿ.. ಸಾಕವ್ವ ಇಕೀ ಸಹವಾಸ... *"ಪರಿಮಳಕ್ಕ ನಿಮ್ಮ ಪರಿಸರ ದಿನಾಚರಣೆ ಸೋಶಿಯಲ್ ಮೀಡಿಯಾದೊಳಗ ಭಾಳ ಚಂದಿತ್ರೀ"* ಅಂತ ಕಮೆಂಟ್ ಕೊಟ್ಟು ಅಲ್ಲಿಂದ ಹೊರಟು ಹೋದಳು....

ಹಿಂಗಿತ್ತು ನೋಡ್ರಿ ನಮ್ಮ ಪರಿಮಳಕ್ಕನ ಸೋಷಿಯಲ್ ಮೀಡಿಯಾ ಪರಿಸರ ದಿನಾಚರಣೆ.. ಮತ್ತ ನೀವೂ ಹಿಂಗ ಮಾಡೋವ್ರೇನೂ.... !?!!



# ದೇವರು ಇದ್ದಾನೆ / ಇಲ್ಲವೇ ಎಂಬ ಜಿಜ್ಞಾಸೆ

ಎರಡು ದಶಕಗಳ ಹಿಂದೆ ನನ್ನ ಅತ್ತೆಯವರ ಚಿಕಿತ್ಸೆಗಾಗಿ ಬೆಂಗಳೂರಿಗೆ ನಾವು ಹೋಗಿದ್ದ ಸಮಯ. ಬೆಂಗಳೂರಿನ ಆಸ್ಪತ್ರೆಯೊಂದರ ಹೊರಾವರಣದಲ್ಲಿ ರೋಗಿಗಳು ಕುಳಿತುಕೊಳ್ಳುವ ಕಡೆ ಫಲಕ ಒಂದರಲ್ಲಿ ಇಂಗ್ಲೀಷಿನ ಕವಿತೆಯೊಂದನ್ನು ಓದಿದ ನೆನಪು. ಅಂತರ್ಜಾಲದಲ್ಲಿ ಆ ಕವಿತೆಯನ್ನು ಬಹಳಷ್ಟು ಬಾರಿ ಹುಡುಕಿದ್ದೇನೆ ಆದರೆ ದೊರೆತಿಲ್ಲ.... ಮನುಷ್ಯ ಜೀವನಕ್ಕೆ ನಿನ್ನೊಂದಿಗೆ ನಾನಿದ್ದೇನೆ ಎಂಬ ಭರವಸೆಯನ್ನು ನೀಡುವ ಆ ಕವಿತೆಯ ತಾತ್ಪರ್ಯ ಇಂತಿದೆ.

ದೇವರನ್ನು ಬಲವಾಗಿ ನಂಬುವ ಆ ವ್ಯಕ್ತಿ ದೇವರು ಯಾವಾಗಲೂ ತನ್ನೊಂದಿಗೆ ಇರುತ್ತಾನೆ ಎಂದು ಭಾವಿಸಿದ್ದನು. ಅಂತೆಯೇ ಎಲ್ಲರಿಗೂ ದೇವರ ಇರುವಿನ ಕುರಿತು ಬಲವಾಗಿ ಪ್ರತಿಪಾದಿಸುತ್ತಿದ್ದನು.

ಅದೊಮ್ಮೆ ಆತನಿಗೆ ಕಡು ಸಂಕಟದ ಕಾಲ. ಅತ್ಯಂತ ತಾಪತ್ರಯದಿಂದ ಬದುಕನ್ನು ಸಾಗಿಸಿದ ಆತ ದೇವರಲ್ಲಿ ಮೊರೆಯಿಟ್ಟ. ದೇವರು ಆತನಿಗೆ ಪ್ರತ್ಯಕ್ಷವಾಗಿ... "ನಾನು ಯಾವಾಗಲೂ ನಿನ್ನೊಂದಿಗೆ ಇರುವೆ ನೋಡು ಮಗು" ಎಂದು ಹೇಳಿ ಆತನ ತಲೆ ಸವರಿದನು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ


Hampi Times E-paper
SCAN AND READ

ಆ ವ್ಯಕ್ತಿಯ ಚಿತ್ತ ಭಿತ್ತಿಯಲ್ಲಿ ಹಿಂತಿರುಗಿ ನೋಡಿದಾಗ ಆತನ ಜೀವನದ ಎಲ್ಲಾ ಘಳಿಗೆಗಳಲ್ಲಿಯೂ ಆತನ ಹೆಜ್ಜೆಗಳಿಗೆ ಜೊತೆಯಾಗಿ ದೇವರ ಹೆಜ್ಜೆಗಳು ಮೂಡಿಬಂದಿದ್ದವು.... ಆದರೆ ಏನಾಶ್ಚರ್ಯ!!

ಆತನ ಕಡು ಕಷ್ಟದ ದಿನಗಳಲ್ಲಿ ಒಂದೇ ಜೊತೆ ಹೆಜ್ಜೆಯ ಗುರುತು ಆತನಿಗೆ ಗೋಚರಿಸಿತು.

ಭಕ್ತನಿಗೆ ದೇವರ ಮೇಲೆ ವಿಪರೀತ ಕೋಪ ಬಂತು ಅಂತೆಯೇ ಆತ ದೇವರನ್ನು ಕುರಿತು "ದೇವ, ನಿನ್ನನ್ನು ಅತಿಯಾಗಿ ನಂಬಿದ ನನ್ನನ್ನು, ನನ್ನ ಕಡುಕಷ್ಟದ ದಿನಗಳಲ್ಲಿ ನೀನು ಕೈಬಿಟ್ಟೆಯಲ್ಲ ಎಂದು ಆರ್ತನಾಗಿ ಕೇಳಿದನು. ಅದಕ್ಕೆ ನಸುನಕ್ಕ ದೇವರು "ಕಂದ,ನಾನೆಲ್ಲಿ ನಿನ್ನ ಕೈಬಿಟ್ಟಿದ್ದೇನೆ" ಎಂದು ಕೇಳಿದನು.

ತುಸು ಮುನಿಸಿನಿಂದಲೇ.... ದೇವಾ! ನೋಡು ಉಳಿದೆಲ್ಲ ದಿನಗಳಲ್ಲಿ ನನ್ನ ಜೊತೆಯಲ್ಲಿ ನಿನ್ನೆರಡು ಹೆಜ್ಜೆ ಗುರುತುಗಳು ಇದ್ದರೆ, ನನ್ನ ಕಡು ಕಷ್ಟದ ದಿನಗಳಲ್ಲಿ ಕೇವಲ ನನ್ನ ಹೆಜ್ಜೆಗಳು ಮಾತ್ರ ಇವೆ. ಇದು ನಿನಗೆ ನ್ಯಾಯವೇ ಎಂದು ಕೇಳಿದನು.



ಇದೀಗ ದೇವರು ಮಗು ಕೋಪಿಸಿಕೊಳ್ಳಬೇಡ, ಅವು ನನ್ನ ಹೆಜ್ಜೆಗಳು.... ನಿನ್ನ ಕಡು ಕಷ್ಟದ ದಿನಗಳಲ್ಲಿ ನಾನು ನಿನ್ನನ್ನು ಎತ್ತಿಕೊಂಡಿದ್ದೇನೆ, ಅಂದರೆ ನಿನ್ನ ಎಲ್ಲಾ ಕಷ್ಟಗಳನ್ನು ಸಹಿಸಿ ನೀನು ಮುಂದುವರೆಯಲು ಸಹಾಯವಾಗುವಂತೆ ನಿನ್ನನ್ನು ಎತ್ತಿಕೊಂಡು ನಾನು ಸಾಗಿದ್ದೇನೆ " ಎಂದು ಹೇಳಿದ.

ನೋಡಿದಿರಾ ಸ್ನೇಹಿತರೆ, ತಾನು ನಂಬಿದ ದೇವರು ತನ್ನ ಕಷ್ಟದ ದಿನಗಳಲ್ಲಿ ತನ್ನೊಂದಿಗೆ ಇರುವುದಲ್ಲದೆ ತನ್ನೆಲ್ಲ ಕಷ್ಟದ ಭಾರವನ್ನು ತಾನೇ ಹೊತ್ತುಕೊಂಡಿದ್ದಾನೆ ಎಂಬ ಭಾವ ಮನುಷ್ಯನಿಗೆ ಕೊಡುವ ಧೈರ್ಯ, ಬದುಕಿನ ಕುರಿತಾದ ಭರವಸೆಗಳನ್ನು ಇನ್ನಾರು ಕೊಡಲಾರರು ಅಲ್ಲವೇ. ಅಂತೆಯೇ ಆ ದೇವರನ್ನು ಜಗದ್ರಕ್ಷಕ, ಜಗನ್ನಿಯಾಮಕ, ಸೃಷ್ಟಿಕರ್ತ ಎಂದು ಹೇಳುವುದು. ಭಕ್ತ ಪರಿಪಾಲಕ ಎಂದು ಪೂಜಿಸುವುದು.

ಆಸ್ತಿಕರಿಗೆ ದೇವರು ಭಕ್ತಿಯ ವ್ಯಕ್ತ ರೂಪವಾದರೆ, ದೇವರನ್ನು ನಂಬದ ಜನರು ಕೂಡ ಈ ಜಗತ್ತನ್ನು ಆಳುವ ಯಾವುದೋ ಒಂದು ಅಗೋಚರ ಶಕ್ತಿ ಇದೆ ಎಂದು ಬಲವಾಗಿ ಒಪ್ಪಿಕೊಳ್ಳುತ್ತಾರೆ.


ಹಣತೆ ಸೂರ್ಯನ ಬೆಳಕಿಗೆ ಸಮನಾಗಲಾರದು ನಿಜ ಆದರೆ ತಾನು ಬೆಳಗುವ ಜಾಗದಲ್ಲಿನ ಅಂಧಕಾರವನ್ನು ಹೋಗಲಾಡಿಸುತ್ತದೆ. ಹಾಗೆಯೇ ದೇವರು ನಮ್ಮೆಲ್ಲ ಕಷ್ಟಗಳನ್ನು ಪರಿಹರಿಸಲಾರನಾದರೂ ಕಷ್ಟಗಳನ್ನು ಎದುರಿಸಲು ನಮಗೆ ಬೆಂಬಲವಾಗಿ ನಿಂತು ಕಾಯುತ್ತಾನೆ ಎಂಬ ಭಾವವೇ ಸಾಕು ಕಗ್ಗತ್ತಲೆಯ ಹಾದಿಯಲ್ಲಿ ಭರವಸೆಯ ಹೊಂಗಿರಣವೊಂದು ಮೂಡಲು. ವಿಜ್ಞಾನ ಮತ್ತು ಆಧ್ಯಾತ್ಮಗಳು ಮನುಷ್ಯ ಜೀವನದ ಎರಡು ಕಣ್ಣುಗಳಿದ್ದಂತೆ. ಅವೆರಡು ಒಂದೇ ನಾಣ್ಯದ ಎರಡು ಮುಖಗಳು..... ಏನಂತೀರಾ??



ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ
ತೆಂಗಿನಕಾಯಿ, ಬಾಳೆ ಹಣ್ಣು, ತಾಜಾ ನುಗ್ಗೆಕಾಯಿ ಮತ್ತು
ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿರಿ
Organic Coconut & Banana, Moringa oleifera Available in best Price
98458 65204 ಮೃತ್ಯುಂಜಯನಗರ, ಹೊಸಪೇಟೆ

**ಕವಿ ಮನಸು**

## ನೀನೊಮ್ಮೆ ಹಿಂದಿರುಗಿ ನೋಡು



ಮುಂಗಾರಿನ ಮಳೆಗೆ ಮಿಂದೆದ್ದ ಬೆಟ್ಟ
ಗುಡ್ಡಗಳ ಹಾದಿಯಲ್ಲಿ ಮುಸ್ಸಂಜೆಯ
ಆಗಸದ ಓಕುಳಿಯ ಸಮಯದಲ್ಲಿ ನೀನು
ಹೋದ ಹಾದಿಯಲ್ಲಿ ನಿನ್ನ ಬೆನ್ನ ಹಿಂದೆ
ನಾನು ಹಿಂಬಾಲಿಸುತ್ತಿರುವೆ, ಮುಸ್ಸಂಜೆ ಕರಗಿ
ಕತ್ತಲಾಗುವ ಹೊತ್ತಿನಲ್ಲಿ ನಿನ್ನ ಸೇರ
ಬಯಸುತ್ತೇನೆ ನೀನೊಮ್ಮೆ ಹಿಂದಿರುಗಿ
ನೋಡು ಮನದಾಳದ ಬಯಕೆಗಳನ್ನು
ಹೇಳಬಯಸುತ್ತೇನೆ ನೀನೊಮ್ಮೆ ಹಿಂದಿರುಗಿ
ನೋಡು, ಮಳೆಯಲ್ಲಿ ಕುಣಿಯುವ
ನವಿಲಿನಂತೆ ಗರಿಗದರಿ ಕುಣಿದು ಬಿಡುವ
ನೀನೊಮ್ಮೆ ಹಿಂದಿರುಗಿ ನೋಡು....

– ಶಿವಪ್ರಕಾಶ್

## ನೀ ಸತ್ತರೆ...

ನಾಲ್ಕು ಮಂದಿನೂ ಸಮಾಧಿವರೆಗೆ
ಒಯ್ಯರು,
ಹೆಗಲು ಬದಲಿಸುವರು ಹತ್ತಾರು ಜನ!
ನಿನ್ನ ಸುಡುತಾರೆ,
ನಿನ್ನ ಬೂದಿ ಎತ್ತೇತ್ತಲೋ ಹಾರುವುದು,
ಬೂದಿಯೂ ಮತ್ತೇ ಸಿಗದು!
ನಿನ್ನ ಹೂಳುತ್ತಾರೆ ,
ಮತ್ಯಾರೋ ಅಲ್ಲಿ ಸಮಾಧಿ ತೋಡುವರು,
ನಿನ್ನ ತುಂಡು ತುಂಡು ಎಲುಬುಗಳು
ಎಲ್ಲೇಲ್ಲೋ!
ಆರಡಿ,ಮೂರಡಿಯೂ ನಿನಗೆ ದಕ್ಕದು,
ದೇವರು ಕೊಟ್ಟ ಈ ಭೂಮಿ,ಸಂಪತ್ತು
ಅವನದೆ,
ಮತ್ತೇಕೆ ಹೊಯ್ದಾಟ,ಕಲ್ಲು
ತೂರಾಟ,ಹಾರಾಟ ಅಹಂ,ದರ್ಪ
ಇರುವಷ್ಟು ದಿನ ದುಡಿದು ತಿನ್ನು,
ಇತರರಿಗೆ ಮಾದರಿಯಾಗಿ ಬಾಳು,
ಪರರ ಬಾಳಿಗೆ ಕಂಟಕ,ಘಾತುಕನಾಗದಿರು,
ಜಗದ ಜನರೆಲ್ಲ ಬಂಧು ಬಳಗವೆಂದು
ಪ್ರೀತಿಯಿಂದ ಕಾಣು.

– ಚಂದ್ರಶೇಖರಯ್ಯ ರೋಣದಮಠ

## ಕನಸಿನ ಚೆಲುವೆ



ಕಂಡಂತ ಕನಸಲ್ಲಿ ಬಂದೆ
ಕವನದ ಸ್ಫೂರ್ತಿ ನಾನೆಂದೆ
ಹೇಗೆ ವರ್ಣಿಸಲಿ ನಿನ್ನ ಚೆಲುವೆ
ನನಸಾಗಿ ಬಾ ನನ್ನೊಲವೆ
ಕಣ್ಣರಳಿಸಿದ ನಿನ್ನ ನೋಟ
ಕಮಲದ ಎಸಳ ನಾಚಿಸಿದೆ
ಅಧರಗಳಲಿ ಅರಳಿದ ಕಿರುನಗೆ
ಮದನನೆಸೆದ ಹೂಬಾಣವಾಗಿದೆ

ನೀನೆಸೆದ ಕಿರುನಗೆಯ ಬಾಣ
ಕಿತ್ತೆಸೆಯಲಾರೆ ಎಂದಿದೆ ಮನ
ಹುಣ್ಣಿಮೆ ಚಂದಿರ ವದನಾರವಿಂದ
ಚಂದಿರನು ಸೋತ ನೋಡಿ ನಿನ್ನಂದ

ಕನಸಲ್ಲಿ ಕಂಡ ಓ ನನ್ನ ಚೆಲುವೆ
ನನಸಲಿ ಬಂದು ತೋರು ಒಲವೇ
ನೀ ಜೊತೆ ಇರಲು ಬಾಳೆಲ್ಲ ಬೆಳಕು
ಏಳು ಜನ್ಮಕೂ ಇರಲಿ ಬಾಳ ತಳುಕು

– ಕೆ ಎಂ ಬಸವರಾಜ
ನಿವೃತ್ತ ಇಂಜನಿಯರ್, ಹೊಸಪೇಟೆ

# ಮುಂಗಾರು ಮಳೆ

■ ಸುವರ್ಣಾ ಭಟ್ಟ.

ಮಳೆಯೆಂದರೆ ಯಾರಿಗೆ ಇಷ್ಟವಿಲ್ಲ ಹೇಳಿ? ಸಾಮಾನ್ಯವಾಗಿ ಎಲ್ಲರಿಗೂ ಇಷ್ಟ. ಮಕ್ಕಳಿಗಂತೂ ಮಳೆಯೆಂದರೆ ತುಂಬಾ ಇಷ್ಟ!. ಮೊದಲ ಮಳೆಯ ಮಣ್ಣಿನ ಘಮ ಆಹಾ ! ಎನಿಸುವುದು ಆಸ್ವಾದಿಸಲು. ಬಿಸಿಲ ಹೋಗಲಾಡಿಸಿ ಮೈ ಮನಸ್ಸು ತಂಪಾಗಿಸುವುದು ಮೊದಲ ಮಳೆ. ಮಡಸಿಟ್ಟ ಛತ್ರಿಗಳು ಹೊರ ಬಂದು ಮಳೆಯಿಂದ ಮನುಜರ ರಕ್ಷಣೆಮಾಡಲು ಸಜ್ಜಾಗುವವು. ಕಾಗದದ ದೋಣಿಯ ಮಳೆಯ ನೀರಿನಲ್ಲಿ ಬಿಡಲು ಮುಂದಾಗುವವರು ಮಕ್ಕಳು. ಮಕ್ಕಳಿಂದ ಹಿರಿಯರವರೆಗೂ ಮನಸ್ಸಿಗೆ ಮುದ ನೀಡುವುದು ಮೊದಲ ಮಳೆ.

**ಭೂಮಿಗೆ ಬರಲಿ ಮಳೆ**
**ಹಸಿರಿಂದ ಕಂಗೊಳಿಸುವುದು ಇಳೆ**
**ಚಿಟ ಪಿಟ ಮಳೆಯಲಿ**
**ನೆನೆಯುವಾಗ ಆನಂದ**
**ತಂಗಾಳಿ ಬೀಸುವ ಆ ವಾತಾವರಣವೆ ಚಂದ**

**ರೈತರು ನಡೆದರು ಹೊಲದ ಕಡೆ**
**ಬೆಳೆದರು ಹಲವು ವಿಧದ ಬೆಳೆ**
**ಎಲ್ಲರ ಖುಷಿಗೆ ಕಾರಣವಾಯ್ತು**
**ಈ ಮುಂಗಾರು ಮಳೆ.**

ಸಾಮಾನ್ಯವಾಗಿ 'ಮೇ' ತಿಂಗಳಲ್ಲಿ ಆರಂಭವಾಗುವ ಗುಡುಗು ಸಹಿತ ಮಳೆಯು, ಹನಿ ಹನಿಯಾಗಿ ಧರೆಯನ್ನು ತಂಪಾಗಿಸುವುದು. ದಿನ ಕಳೆದಂತೆ ಮಳೆಯು ಹೆಚ್ಚುತ್ತಾ! ಅತಿಯಾದ ಮಳೆಯಿಂದ ತೊಂದರೆಯು ಉಂಟಾಗುವುದು.

ಹನಿ ಹನಿಯಾಗಿ ಗಾಳಿ,ಗುಡುಗು ಸಹಿತ ಧರೆಗೆ ಬೀಳುವ ಮೊದಲ ಮಳೆಯು ಭೂಮಿಯನ್ನು ತಂಪಾಗಿಸುವುದು. ದಿನ ಕಳೆದಂತೆ ಮೋಡವು ಕೋಪಗೊಂಡು ಆಕಾಶವು ತೂತಾದಂತೆ 'ಧೋ' ಎಂದು ಒಂದೇ, ಸಮನೆ ಸುರಿಯುವ ಮಳೆಯನ್ನು ಮನೆಯೊಳಗಡೆ ಕುಳಿತು ನೋಡುವುದೇ ಚಂದ.

ಹೊಲ ಗದ್ದೆಗಳಲ್ಲಿ ಬಿತ್ತನೆ ಮಾಡಿ ಹಸಿರು ತೆನೆಗಳ ಕಾಣಲು ಸಾಧ್ಯ. ಅಲ್ಲಲ್ಲಿ ತುಂಬಿ ಹರಿಯುವ ನದಿಗಳು, ಜಲಪಾತಗಳು ಕಣ್ಮನ ಸೆಳೆಯುತ್ತವೆ.

ಕಸ, ಕಡ್ಡಿಯ ಹೊತ್ತು ತರುವ ಕೆಂಪು ಬಣ್ಣದ ನೀರು ಅತೀ, ಬಿರುಸಿನಿಂದ ಹೋಗಿ ಹತ್ತಿರದ ಹೊಳೆ ಸೇರುವುದು. ಮರಗಳು ಇರದ ಜಾಗವು ನೀರಿನ ರಭಸಕ್ಕೆ ಕೊಚ್ಚಿ ಹೋಗಿ ಅಲ್ಲಲ್ಲಿ ಮಣ್ಣಿನ ಸವಕಳಿ ಉಂಟಾಗುತ್ತದೆ.

**ಮಳೆಯಿಂದ ಸಮಸ್ಯೆ**

* ದಿನ ಕಳೆದಂತೆ ಬಿಡದೆ ಸುರಿವ ಮಳೆಯಿಂದ ತೊಂದರೆಯಾಗುತ್ತದೆ. ಗದ್ದೆ ತೋಟಗಳಿಗೆ ನುಗ್ಗುವ ನೀರು ಬೆಳೆ ಹಾನಿ ಮಾಡುತ್ತದೆ.



* ಮನೆಯ ಅಕ್ಕ– ಪಕ್ಕದ ಮರಗಳು ಗಾಳಿ ಮಳೆಗೆ ಕುಸಿದು ಬಿದ್ದು ಮನೆಯ ಹೆಂಚು ಮುರಿದು ನೀರು ಒಳ ಬರುತ್ತದೆ.
* ಹೊಳೆ ಹತ್ತಿರವಿರುವ ಮನೆಯೊಳಗೆ ನೀರು ನುಗ್ಗಿ ಊರಿಗೆ ನೆರೆ ಬಂದು ಆಹಾರ ,ಬೆಳೆ ನೀರಿನ ಪಾಲಾಗುತ್ತದೆ.
* ರಸ್ತೆಯ ಮಧ್ಯ ಗುಡ್ಡ ಕುಸಿದು ಸಂಚಾರ ಅಸ್ತವ್ಯಸ್ತವಾಗುತ್ತದೆ.
* ಮರ ಮುರಿದು ವಿದ್ಯುತ್ ಪೂರೈಕೆ ಇಲ್ಲದೆ ದಿನ ದೂಡಬೇಕು.
* ದನ ಕರುಗಳು ನೀರಿನ ಪಾಲಾಗುವರು.
* ಅಡಿಕೆ ಬೆಳೆಗೆ ಔಷಧೀಯ ಸಿಂಪಡಣೆ ಮಾಡಲು ಕಷ್ಟವಾಗುತ್ತದೆ.
* ಹೊರಗಡೆ ಹೊಗಲಾಗದೆ ಮನೆಯಲ್ಲಿ ಕುಳಿತು ದಿನ ಕಳೆಯ ಬೇಕಾಗುತ್ತದೆ.

ಇವೆಲ್ಲದರ ಮಧ್ಯೆ ಮಕ್ಕಳಿಗೆ ಶಾಲೆಗೆ ರಜೆ ಕೊಡುವುದೊಂದೆ ಖುಷಿಯ ಸಂಗತಿಯಾಗುತ್ತದೆ. ಚಿಕ್ಕವರಾಗಿದ್ದಾಗ ಮಳೆಯಿಂದ ಸಿಗುವ ರಜೆ ಖುಷಿ ನೀಡುತ್ತದೆ. ಆದರೆ ಪರಿಸ್ಥಿತಿಯ ಅರಿವಿರುವ ದೊಡ್ಡವರಿಗೆ ಮಳೆ ಹಾನಿಯಿಂದ ನೋವಾಗುತ್ತದೆ.

'ವರುಣನ ಆರ್ಭಟದಿಂದ ಮೂಕ ಪ್ರಾಣಿಗಳು, ಜನರು, ತೋಟ ,ಹೊಲ ಎಲ್ಲ ನೀರಿನ ಪಾಲಾಗುತ್ತದೆ. ಎನ್ನುವುದು ಬೇಸರದ ವಿಷಯ'.

ಮನುಜನ ಕೃತ್ಯದಿಂದ ಪ್ರಕೃತಿ ಮುನಿಸಿಕೊಂಡು ಕಾಲ ಕಾಲಕ್ಕೆ ಮಳೆ ,ಬೆಳೆ ಇಲ್ಲದಂತಾಗಿದೆ. ಒಮ್ಮೆ! ಅತಿವೃಷ್ಠಿ ಇನ್ನೊಮ್ಮೆ! ಅನಾವೃಷ್ಠಿ . ಜನರ ತಪ್ಪುಗಳ ಮನ್ನಿಸಿ ಕಾಲಕ್ಕೆ ತಕ್ಕಂತೆ ಮಳೆ ಬೆಳೆ ನೀಡು ದೇವಾ.

## ಸ್ವಾಭಿಮಾನಿಯಾಗು ಅಹಂಕಾರಿ ಯಾಗಬೇಡ.

■ ನಂದಿನಿ ಸನಬಾಳ್

ಆನಂದ ಪ್ರತಿಷ್ಠಿತ ಕಂಪನಿಯೊಂದರಲ್ಲಿ ಒಬ್ಬ ಇಂಜಿನಿಯರ ಆಗಿದ್ದ. ಬುದ್ಧಿವಂತ, ಚೆಲುವ, ತಂತ್ರಜ್ಞ, ಅದರಲ್ಲೂ ಮಾತೃಹೃದಯಿ ಎಂದರೆ ತಪ್ಪಾಗಲಾರದು. ಹೊಸದಾಗಿ ಬಂದ ಉದ್ಯೋಗಳಿಗೆ ಮಾರ್ಗದರ್ಶನ ಸಲಹೆಗಳನ್ನು ನೀಡುತ್ತಿದ್ದ.ಆನಂದನಿಗೆ ವಿರೋಧಿಗಳ ಸಂಖ್ಯೆಗೇನು ಕಡಿಮೆ ಇರಲಿಲ್ಲ. ಪ್ರತಿಯೊಬ್ಬ ಯುವತಿಗು ಇವನತ್ತ ಒಲವು. ಬಿಡುವಿನ ಸಮಯದಲ್ಲಿ



ಆಗಾಗ ಒಬ್ಬರಿಲ್ಲಒಬ್ಬ ಯುವತಿಯರು ಇವರ ಹತ್ತಿರ ಬರುತ್ತಿದ್ದರು, ಕೆಲವು ಬಾರಿ ಯುವತಿಯರ ಗುಂಪೆ ಬರುತ್ತಿತ್ತು. ಹೊಸ ಹೊಸ ಪ್ರೊಜೆಕ್ಟ ಬಂದಾಗ ಇವರದ್ದೆ ಪ್ರೆಸೆಂಟೇಷನ್ ಇರುತ್ತಿತ್ತು. ಇವರ ಪ್ರಗತಿ ಸಹಿಸದ ಕೆಲವರು ಇವರನ್ನುಹಿಂಬ್ಬಾಲಿಸುತ್ತಿದ್ದರು.ಬಿಡುವಿನ ಸಮಯದಲ್ಲೆಲ್ಲ ಮಹಿಳಾ ಗುಂಪಿನ ಜೊತೆಗೆ ಚರ್ಚಿಸುವುದನ್ನು ನೋಡಿದ ಕೆಲವು ಟೆಕ್ಕಿಗಳು MD ಸಾಹೇಬರಿಗೆ ಹೇಳಿಯೇ ಬಿಟ್ಟರು, ಇವನು ತ್ರಿತೀಯ ಲಿಂಗಿ, ಹೆಣ್ಣು ಮಕ್ಕಳೊಂದಿಗೆ ಅನೈತಿಕ ವ್ಯವಹಾರ ಮಾಡುತ್ತಾನೆ ಹಾಗೆ ಹೀಗೆ ಏನೆಲ್ಲ ಹೇಳಿದಾಗ ನಿಜವನ್ನು ತಿಳಿದುಕೊಳ್ಳದ ಒಆ ಆನಂದನನ್ನು ಕೆಲಸದಿಂದ ತೆಗೆದುಹಾಕುವನು. ವಿವಿಧ ರೀತಿಯಲ್ಲಿ ಅಪಹಾಸ್ಯ ಮಾಡಲು ಪ್ರಾರಂಭಿಸಿದರು. ಕಂಪನಿಯ ಗ್ರೂಪಗಳಲ್ಲಿ ಸೀರೆ ಉಟ್ಟ ಆನಂದನ ಫೋಟೋಗಳನ್ನು ಹಾಕಿ ಟ್ರೊಲ್ ಮಾಡುತ್ತಿದ್ದರು. ಯಾವುದಕ್ಕೂ ಕಿವಿಗೊಡದ ಆನಂದಗೆ ಇನ್ನೊಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾಗ.ಯಶಶ್ವಿ ಬಿಸಿನೆಸ್ ಮ್ಯಾನ್, "Man of the year" ಪ್ರಶಸ್ತಿ ದೊರೆಯುವುದು.ಈ ಸಮಾರಂಭದಲ್ಲಿ ವಿವಿಧ ಕಂಪನಿಗಳ ಉದ್ಯೋಗಿಗಳು ಭಾಗಿಯಾಗಿದ್ದರು,ಕಾರ್ಯಕ್ರಮ ಆರಂಭವಾಗುತ್ತಿದ್ದಂತೆ man of the year ಆನಂದ ಉರ್ಫ್ ಆನಂದಿ come on d stage ಎಂದಾಗ, ಸ್ಟೇಜ್ ಮೇಲೆ ಬಂದ ಆನಂದನ್ನನ್ನು ಸೀರೆಯಲ್ಲಿ ನೋಡಿ ನಿಬ್ಬೆರಾಗದ ಜನರು ಅವನ್ನನ್ನೆ ನೋಡುತ್ತಿದ್ದ ಹಾಗೆ ಆನಂದ ಮಾತನ್ನು ಆರಂಭಿಸಿದನು, ನಾನು ತ್ರಿತೀಯ ಲಿಂಗಿ, ಹುಟ್ಟುವಾಗ ಯಾರಿಗೆ ತಾನೆ ಗೊತ್ತಿರುತ್ತೆ? ಹೆಣ್ಣು, ಗಂಡು, ತ್ರಿತೀಯ ಲಿಂಗಿ ಎಲ್ಲವು ದೇವರ ಇಚ್ಚೆ .ಲಿಂಗ ಯಾವುದಾದರೇನು ಸಾಧನೆ ಮಾಡುವ ಛಲ, ಇತರರಿಗೆ ಸಹಾಯ ಸಹಕಾರ ಮಾಡುವ ಮನಸ್ಸು ಇರಬೇಕು, ನಮ್ಮ ಕಾಯಕ ನಿಷ್ಠೆಯಿಂದ ಮಾಡುವುದು ನನ್ನ ಗುರಿ. ಈ ಹಿಂದೆ ನನ್ನ ಬಗ್ಗೆ ಸಹುದ್ಯೋಗಿಗಳು ಅಪಹಾಸ್ಯ ಮಾಡುತ್ತಿದ್ದರು, ನನ್ನ ಹತ್ತಿರ ಅನೇಕ ಸಮಸ್ಯೆಗಳೊಂದಿಗೆ ನನ್ನ ಸಮುದಾಯದವರು ಬರುತ್ತಿದ್ದರು, ನಾನು ಅವರಿಗೆ ಮಾರ್ಗದರ್ಶನ ಹಾಗೂ ಸಹಾಯ ಮಾಡುತ್ತಿದ್ದೆ, ನನ್ನ ಬಗ್ಗೆ ತಿಳಿದುಕೊಳ್ಳದೆ ನನ್ನನ್ನು ಹೆಣ್ಣುಮಕ್ಕಳ ವ್ಯಾಪಾರಿ, ಹೆಣ್ಣುಮಕ್ಕಳ ಜೊತೆ ಅನೈತಿಕ ಸಂಬಂಧ ಹೊಂದಿದ್ದಾನೆ, ತ್ರಿತೀಯ ಲಿಂಗಿ ಎಂದು ಅಪಮಾನ ಮಾಡಿ ನನ್ನನ್ನು ಕಂಪನಿಯಿಂದ ತೆಗೆದುಹಾಕಿದ್ದರು ಆದರೂ ಎದೆಗುಂದದೆ, ಭಯಪಡದೆ ನಾನು ಮುಂದುವರೆದೆ, ನನ್ನಲ್ಲಿ ಅರ್ಹತೆ ಇದೆ, ನಾನು ಈಗ ಕೆಲವು ಕಂಪನಿಗಳನ್ನು ಖರೀದಿಸಿದ್ದು ಅನೇಕ ಕಂಪನಿಗಳಲ್ಲಿ ಷೇರ್ ಹೋಡಿದ್ದೇನೆ ಎಂದು ತಾನು ಖರಿಸಿದ ಕಂಪನಿಗಳ ಹೆಸರಲ್ಲಿ ಈ ಹಿಂದೆ ಕೆಲಸದಿಂದ ಹೊರ ಹಾಕಿದ ಕಂಪನಿಯ ಹೆಸರು ಕೂಡ ಇತ್ತು.ಆನಂದ ಖರೀದಿಸಿದ್ದು ಗೊತ್ತಾಗಿ ಎಲ್ಲ ನೌಕರರು ಆಶ್ಚರ್ಯಗೊಂಡರು.ಕ್ಷಮೆ ಯಾಚಿಸಿ ಆನಂದ ಉರ್ಫ್ ಆನಂದಿಯನ್ನು ಸನ್ಮಾನಿಸಿ ಸತ್ಕರಿಸಿ ಕ್ಷಮೆ ಕೇಳಿದರು.

# ನವೀಕರಣಕ್ಕೆ ಕಿರುಕುಳ ನೀಡಬಾರದು

## ನೆರೆ ರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ಕಳ್ಳಸಾಗಾಣಿಕೆ ಮೂಲಕ ನುಸುಳುವ ಮದ್ಯವನ್ನು ಕಡ್ಡಾಯ ತಡೆಗಟ್ಟಬೇಕು : ಸಿಎಂ



■ ಹಂಪಿ ಟೈಮ್ಸ್ ಬೆಂಗಳೂರು:
ಅಬಕಾರಿ ಪರವಾನಗಿಗಳ ನವೀಕರಣಕ್ಕೆ ಸನ್ನದುದಾರರಿಗೆ ಕಿರುಕುಳ ನೀಡಬಾರದು. ನೆರೆ ರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ಕಳ್ಳಸಾಗಾಣಿಕೆ ಮೂಲಕ ನುಸುಳುವ ಮದ್ಯವನ್ನು ಕಡ್ಡಾಯ ತಡೆಗಟ್ಟಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಬಕಾರಿ ಇಲಾಖಾ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದರು.

ಮಂಗಳವಾರ ಅಬಕಾರಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿ ಈ ಸೂಚನೆ ನೀಡಿದರು. ಇಲಾಖೆಯ ತೆರಿಗೆ ಸಂಗ್ರಹ ಸಾಮರ್ಥ್ಯವನ್ನು ಆಧರಿಸಿಯೇ ನಿಗದಿ ಪಡಿಸುವ ಗುರಿ ತಲುಪಲು ಅಧಿಕಾರಿಗಳು ಗರಿಷ್ಠ ಪ್ರಯತ್ನ ಮಾಡಬೇಕು ಎಂದು ಸೂಚಿಸಿದರು.

ಚುನಾವಣಾ ನೀತಿ ಸಂಹಿತೆ ಕಾರಣದಿಂದ ತೆರಿಗೆ ಸಂಗ್ರಹ ಬೆಳವಣಿಗೆ ದರ ನಿರೀಕ್ಷಿತ ಮಟ್ಟ ತಲುಪಿಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಮುಂದಿನ ದಿನಗಳಲ್ಲಿ ಇದನ್ನು ಭರ್ತಿ ಮಾಡುವಂತೆ ಸಿಎಂ ಸೂಚಿಸಿದರು. ಇಲಾಖೆಯಲ್ಲಿ ಕಾನ್ಸ್‌ಟೇಬಲ್, ಸಬ್ ಇನ್ಸ್‌ಪೆಕ್ಟರ್‌ಗಳ ನೇಮಕಾತಿ ಹಾಗೂ ವಾಹನಗಳ ಅಗತ್ಯತೆ ಕುರಿತಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಮುಖ್ಯಮಂತ್ರಿಗಳು ಸೂಚಿಸಿದರು. ಕರ ಸಮಾಧಾನ ಯೋಜನೆಯಡಿ 5.10 ಕೋಟಿ ರೂ. ವಸೂಲಾಗಿದ್ದು, ಯೋಜನೆಯನ್ನು ಇನ್ನಷ್ಟು ಕಾಲ ವಿಸ್ತರಿಸುವಂತೆ ಅಧಿಕಾರಿಗಳು ಕೋರಿದರು. ಅಬಕಾರಿ ಇಲಾಖೆಯ ವ್ಯವಹಾರಗಳನ್ನು ಸರಳಗೊಳಿಸುವ ನೂತನ ತಂತ್ರಾಂಶವನ್ನು ಲೋಕಾರ್ಪಣೆ ಮಾಡಿದರು.

ಆನ್‌ಲೈನ್‌ನಲ್ಲಿಯೇ ಇಲಾಖೆಯ ಸೇವೆಗಳನ್ನು ಒದಗಿಸುವ ಹಾಗೂ ಅಬಕಾರಿ ಇಲಾಖೆಗೆ ಸಂಬಂಧಿಸಿದ ನಿಯಮ ಉಲ್ಲಂಘನೆ ಹಾಗೂ ಅಕ್ರಮದ ಪ್ರಕರಣಗಳು ಹಾಗೂ ಅಧಿಕಾರಿಗಳ ತಪಾಸಣೆಯನ್ನೂ ಇದರಲ್ಲಿ ದಾಖಲಿಸಲು ಹಾಗೂ ಅನುಸರಿಸಲು ಅವಕಾಶವನ್ನು ಇದರಲ್ಲಿ ಕಲ್ಪಿಸಲಾಗಿದೆ.

ಅಬಕಾರಿ ಸಚಿವ ಆರ್. ಬಿ. ತಿಮ್ಮಾಪುರ, ಮುಖ್ಯ ಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜು ಹಾಗೂ ನಸೀರ್ ಅಹ್ಮದ್, ಆರ್ಥಿಕ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ಆರ್ಥಿಕ ಇಲಾಖೆ ಕಾರ್ಯದರ್ಶಿ ಪಿ.ಸಿ.ಜಾಫರ್, ಅಬಕಾರಿ ಇಲಾಖೆಯ ಆಯುಕ್ತ ಡಾ.ರವಿಶಂಕರ್ ಉಪಸ್ಥಿತರಿದ್ದರು.

# ರೈತರಿಗೆ ಬಿತ್ತನೆ ಬೀಜಗಳು, ರಸಗೊಬ್ಬರದ ಕೊರತೆಯಾಗದಿರಲಿ: ನಲಿನ್ ಅತುಲ್

■ ಹಂಪಿ ಟೈಮ್ಸ್ ಕೊಪ್ಪಳ

ಈಗಾಗಲೇ ಮುಂಗಾರು ಮಳೆಗಳು ಆರಂಭವಾಗಿದ್ದು, ಹೀಗಾಗಿ ಬಿತ್ತನೆ ಮಾಡಲು ಜಿಲ್ಲೆಯಲ್ಲಿ ರೈತರ ಅವಶ್ಯಕತೆಗೆ ತಕ್ಕಂತೆ ಬಿತ್ತನೆ ಬೀಜಗಳು ಮತ್ತು ರಸಗೊಬ್ಬರದ ದಾಸ್ತಾನು ಮಾಡಿಕೊಳ್ಳಲು ಅಗತ್ಯ ಕ್ರಮ ವಹಿಸಿ, ಜಿಲ್ಲೆಯ ರೈತರಿಗೆ ಬಿತ್ತನೆ ಸಂದರ್ಭ ತೊಂದರೆ ಆಗಬಾರದು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಹೇಳಿದರು.

ಮುಂಗಾರು 2024ಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಕೈಗೊಂಡಿರುವ ಪೂರ್ವ ಸಿದ್ಧತೆಗಳ ಬಗ್ಗೆ ಸೋಮವಾರ (ಜೂನ್ 10) ದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ರೈತರಿಗೆ ಅಗತ್ಯ ಪ್ರಮಾಣದ ಬಿತ್ತನೆ ಬೀಜ ಹಾಗೂ ರಸಗೊಬ್ಬರವನ್ನು ಪೂರೈಸುವುದರ ಜೊತೆಗೆ ಕಳಪೆ ಗುಣಮಟ್ಟದ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಪೂರೈಕೆ ಹಾಗೂ ಮಾರಾಟವಾಗದಂತೆ ಎಚ್ಚರ ವಹಿಸಬೇಕು. ಅಂತಹ ಪ್ರಕರಣಗಳು ಕಂಡುಬಂದಲ್ಲಿ ಕೂಡಲೇ ಪ್ರಕರಣ ದಾಖಲಿಸಿ ಅಗತ್ಯ ಕ್ರಮಕೈಗೊಳ್ಳಬೇಕು. ಬಿತ್ತನೆ ಬೀಜ ಹಾಗೂ ರಸಗೊಬ್ಬರ ಮಾರಾಟಗಾರರು ಸರ್ಕಾರ ನಿಗದಿಪಡಿಸಿದ ದರದಲ್ಲಿಯೇ ರೈತರಿಗೆ ಮಾರಾಟ ಮಾಡಬೇಕು. ಈ ಕುರಿತು ನಿಗದಿತ ದರಪಟ್ಟಿಯನ್ನು ಪ್ರತಿ ಮಾರಾಟ ಮಳಿಗೆಯಲ್ಲಿ ಪ್ರದರ್ಶಿಸಬೇಕು. ರೈತರಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ಸಂಬಂಧಿಸಿದ ಎಲ್ಲ ಇಲಾಖೆಗಳು ಅಗತ್ಯ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ ಅವರು ಮಾತನಾಡಿ, ಮಳೆಗಾಲ ಹಿನ್ನೆಲೆಯಲ್ಲಿ ಕಂದಾಯ, ಕೃಷಿ, ತೋಟಗಾರಿಕಾ ಮತ್ತು ಇನ್ನಿತರ ಇಲಾಖೆಗಳ ಅಧಿಕಾರಿಗಳೊಂದಿಗೆ ಗ್ರಾಮಮಟ್ಟದ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಸಮನ್ವಯ ವಹಿಸಿ ಕಾರ್ಯನಿರ್ವಹಿಸಬೇಕು. ಮಳೆಗಾಲ ಹಿನ್ನೆಲೆಯಲ್ಲಿ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು ಕಾರ್ಯನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ. ಅವರು ಮಾತನಾಡಿ, ಜಿಲ್ಲೆಯಲ್ಲಿ >> 4






# ಕೃಪಾಂಕ ಮಕ್ಕಳ ಭವಿಷ್ಯಕ್ಕೆ ಮಾರಕ

## ಶಾಸಕ ಕೆ.ನೇಮಿರಾಜ್‌ನಾಯ್ಕ್ ಹೇಳಿಕೆ | ಪ್ರತಿಭಾನ್ವಿತ ಪಂಚಮಸಾಲಿ ವಿದ್ಯಾರ್ಥಿಗಳಿಗೆ ಪುರಸ್ಕಾರ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಮುಂದಿನ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ಸಮಸ್ಯೆಗೀಡುಮಾಡಿದೆ ರಾಜ್ಯ ಸರ್ಕಾರ ಎಂದು ಶಾಸಕ ಕೆ.ನೇಮಿರಾಜ್‌ನಾಯ್ಕ್ ಆರೋಪಿಸಿದರು.

ಪಟ್ಟಣದ ಪಂಚಮಸಾಲಿ ಭವನದಲ್ಲಿ ಸಮುದಾಯದ ತಾಲೂಕು ಸಂಘಟನೆಯಿಂದ ನಡೆದ, 2023–24ರಲ್ಲಿ ಉತ್ತೀರ್ಣರಾದ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿಯಲ್ಲಿ ಶೇ.85ಕ್ಕೂ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಾರ್ಷಿಕ ಪರೀಕ್ಷೆಯಲ್ಲಿ ಕೃಪಾಂಕ ಎನ್ನುವ ಹೆಚ್ಚಳ ಅಂಕಗಳನ್ನು ನೀಡಿ, ಉತ್ತೀರ್ಣರಾಗಲು ಅರ್ಹತೆ ಇಲ್ಲದ ವಿದ್ಯಾರ್ಥಿಗಳು ಸಹ ಉತ್ತೀರ್ಣರಾಗಿ, ಮುಂದಿನ ವ್ಯಾಸಂಗದ ಪೂರ್ವಭಾವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಕಂಟಕವಾಗಲಿದೆ ಎಂದರು. ಪ್ರತಿಭಾವಂತ ವಿದ್ಯಾರ್ಥಿಗಳು ಮುಂದಿನ ಉತ್ತಮ ಮತ್ತು ಉನ್ನತ ಶಿಕ್ಷಣವನ್ನು ಪಡೆಯುವ ಮೂಲಕ ನಿಮ್ಮ ಪಾಲಕರಿಗೂ ಮತ್ತು ಊರಿಗೂ ಕೀರ್ತಿವಂತರಾಗಿ ಎಂದು ಶುಭಕೋರಿದರು. ಸಾರ್ವಜನಿಕವಾಗಿ ಹೇಳುವುದಾದರೆ, ಮನುಷ್ಯನಿಗೆ ಸ್ವಾವಲಂಬಿಗಳಾಗಿ ಬದುಕಲು ಉತ್ತೇಜನ ನೀಡುವ ಯೋಜನೆಗಳನ್ನು ರೂಪಿಸಬೇಕು, ವಿನಃ ಉಚಿತ ಯೋಜನೆಗಳು ಅನಗತ್ಯ, ಅವು ತಾತ್ಕಲಿಕವಾಗುವುದರಿಂದ ದೇಶದ ಮುಂದಿನ ಭವಿಷ್ಯಕ್ಕೆ ಮಾರಕವಾಗಲಿವೆ ಎಂದರು.

ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ರಾಜ್ಯಾಧ್ಯಕ್ಷ ಜಿ.ಬಿ.ಪಾಟೀಲ್ ಮಾತನಾಡಿ, ರಾಜ್ಯದಲ್ಲಿ 60 ಸಾವಿರ ಸರ್ಕಾರಿ ಖಾಲಿ ಹುದ್ದೆಗಳನ್ನು ರಾಜ್ಯ ಸರ್ಕಾರ ಭರ್ತಿ ಮಾಡಲಾಗುತ್ತಿಲ್ಲ. ಸರ್ಕಾರದ ಮೇಲಿನ ಅವಲಂಬನೆ ತಗ್ಗಿಸಿ, ಸ್ವಾವಲಂಬನೆಯತ್ತ ಸಮಾಜದ ಚಿಂತನೆ ನಡೆಯಬೇಕು. ಆಸಕ್ತಿಗೆ ಅನುಗುಣವಾಗಿ ಮಕ್ಕಳಿಗೆ ಪೂರಕ ಶಿಕ್ಷಣ ನೀಡಬೇಕಿದೆ ಎಂದರು.

ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಐಗೋಳ್ ಚಿದಾನಂದ ಮಾತನಾಡಿ, ಸಮುದಾಯದ ಪೀಠಗಳಿಂದ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೂ ಮತ್ತು ಪಾಲಕರಿಗೂ ಅನುಕೂಲವಾಗಲು, ವೃತ್ತಿಪರ ಮತ್ತು ತರಬೇತಿ ಶಿಕ್ಷಣಗಳನ್ನು ನೀಡುವ ಶಿಕ್ಷಣ ಸಂಸ್ಥೆಯನ್ನು ತೆರೆಯಬೇಕು. ಪ್ರತಿಭಾವಂತ ವಿದ್ಯಾರ್ಥಿಗಳಿಗೂ ಇದರಿಂದ ಸಾಕಷ್ಟು ಉಪಯೋಗವಾಗಲಿದೆ ಎಂದು ಸಾನ್ನಿಧ್ಯ ವಹಿಸಿದ್ದ ಶ್ರೀಗಳ ಹಾಗೂ ಸಮುದಾಯದ ಮುಖಂಡರ ಗಮನ ಸೆಳೆದರು. ಸಮಾಜದ ಜಿಲ್ಲಾಧ್ಯಕ್ಷ ಪ್ರಕಾಶ್ ಪಾಟೀಲ್, ಬಳ್ಳಾರಿ ಅಧ್ಯಕ್ಷ ಬೊಪ್ಪಖಾನ್ ಕುಮಾರಸ್ವಾಮಿ, ಮಹಿಳಾ ಘಟಕದ ಅಧ್ಯಕ್ಷೆ ಮಂಗಳಾಬಸವರಾಜ ಮಾತನಾಡಿದರು.

ನಿಡಸೋಸಿಯ ದಾರುಗುಂಡೇಶ್ವರ ಮಠದ ನಿಜಲಿಂಗೇಶ್ವರ ಸ್ವಾಮೀಜಿ, ಮನಗೂಳಿಯ ಸಂಗನಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಸಮಾಜದ ಗೌರವಾಧ್ಯಕ್ಷ ಬಾವಿ ಬೆಟ್ಟಪ್ಪ, ತಾಲೂಕು ಉಪಾಧ್ಯಕ್ಷ ಮಂಜುನಾಥ ಗೌಡ, ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ವಿ.ನಿರ್ಮಲ ಮೆಣಸಿಗಿ, ವಾಣಿ ಶಿವಶಂಕರಗೌಡ, ಮಂಜುಳಾ ಬಳಿಗಾರ, ಕೊಟ್ಟೂರೇಶ್ವರಿ, ಬದಾಮಿ ಮುತ್ತಣ್ಣ, ಬಾವಿ ರವೀಂದ್ರ, ಹನಸಿ ಸಿದ್ದೇಶ, ಬಿಜೆಪಿ ತಾಲೂಕು ಅಧ್ಯಕ್ಷ ಬೆಣಕಲ್ಲು ಪ್ರಕಾಶ, ವಿ.ಮನೋಹರ, ಸಂಚಿ ಶಿವಕುಮಾರ್, ಸಮುದಾಯದ ನೌಕರರ ಸಂಘದ ಅಧ್ಯಕ್ಷ ಎಚ್.ಸುರೇಶ್, ಗುರುಭವನ ಸಮಿತಿ ಅಧ್ಯಕ್ಷ ಪ್ರಹ್ಲಾದ್ ಮತ್ತಿತರರು ಇದ್ದರು.

ಸಮುದಾಯದ ತಾಲೂಕು ಅಧ್ಯಕ್ಷ ಅಕ್ಕಿ ಶಿವಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾರದ ಮಂಜುನಾಥ ಪ್ರಾರ್ಥಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿಂತ್ರಪಳ್ಳಿ ಗುರುಬಸವರಾಜ ಸೊನ್ನದ್, ಟ್ರಸ್ಟ್ ಕಾರ್ಯದರ್ಶಿ ಎಚ್.ಪಿ.ಶಿವಶಂಕರಗೌಡ, ಶಿಕ್ಷಕರಾದ ಇಟ್ಟಿಗಿ ಮಂಜುನಾಥ, ಇಟ್ಟಿಗಿ ಪ್ರಭಾಕರ ನಿರ್ವಹಿಸಿದರು.

# ಇಂದು ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ : ಜಾಥಾ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲೂಕು ಕಾನೂನು ಸೇವಾ ಸಮಿತಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ವಕೀಲರ ಸಂಘ ಹೊಸಪೇಟೆ, ಜಿಲ್ಲಾ ಕಾರ್ಮಿಕ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಡಾನ್ ಬೋಸ್ಕೋ ಸಂಸ್ಥೆ ಸೇರಿದಂತೆ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಜೂನ್ 12 ರಂದು "ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ" ಕಾರ್ಯಕ್ರಮ ನಡೆಯಲಿದೆ.

ಈ ನಿಮಿತ್ತ ಬೆಳಿಗ್ಗೆ 9.30ಕ್ಕೆ ಸರ್ದಾರ್ ಪಟೇಲ್ ಸರ್ಕಾರಿ ಪ್ರೌಢಶಾಲೆ ಹೊಸಪೇಟೆಯಿಂದ ಜಾಥಾ ಆರಂಭವಾಗಿ ಬಳ್ಳಾರಿ ವೃತ್ತದ ಮೂಲಕ ಬಸ್ ಡಿಪೋ ರಸ್ತೆಯಿಂದ ಮೂರು ಅಂಗಡಿ ವೃತ್ತದ ಮುಖ್ಯ ರಸ್ತೆಯ ಮೂಲಕ ಡಾನ್ ಬೋಸ್ಕೋ ಸಂಸ್ಥೆಯ ವೇದಿಕೆಗೆ ತಲುಪುವುದು. ಜಾಥಾಕ್ಕೆ ಹೊಸಪೇಟೆಯ ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ ಎ ನಂದಗಡಿ ಅವರು ಚಾಲನೆ ನೀಡುವರು.

ಬಳಿಕ ಬೆಳಗ್ಗೆ 10 ಗಂಟೆಗೆ ಡಾನ್ ಬೋಸ್ಕೋ ಸಂಸ್ಥೆಯಲ್ಲಿ ವೇದಿಕೆಯ ಕಾರ್ಯಕ್ರಮವನ್ನು ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಹೇಮಲತಾ ಬಿ. ಹುಲ್ಲೂರು ಅವರು ಉದ್ಘಾಟಿಸುವರು.

ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಅಧ್ಯಕ್ಷತೆ ವಹಿಸುವರು.

ವಿಶೇಷ ಉಪನ್ಯಾಸ: ವಕೀಲರ ಸಂಘದ ಸದಸ್ಯರಾದ ಎ ಕರುಣಾನಿಧಿ ಅವರು ಇದೆ ವೇಳೆ ವಿಶೇಷ ಉಪನ್ಯಾಸ ನೀಡುವರು ಎಂದು ಪ್ರಕಟಣೆ ತಿಳಿಸಿದೆ.

# ಬೀಜ ರಸಗೊಬ್ಬರ ಕೊರತೆಯಾಗದಿರಲಿ

**ಮೂರನೇ ಪುಟದಿಂದ**


ಜೂನ್ 01 ರಿಂದ ಜೂನ್ 09 ರವರೆಗೆ ವಿವಿಧ ತಾಲೂಕುಗಳಲ್ಲಿ ವಾಡಿಕೆ ಮಳೆಗಿಂತ ಶೇ. 120 ರಷ್ಟು ಹೆಚ್ಚಿನ ಮಳೆ ಸುರಿದಿದೆ.

**ಬಿತ್ತನೆ ಬೀಜ ದಾಸ್ತಾನು :** 2024–25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಭತ್ತ, ಮೆಕ್ಕೆಜೋಳ, ಸಜ್ಜೆ, ನವಣೆ, ಹೆಸರು, ತೊಗರಿ, ಸೂರ್ಯಕಾಂತಿ, ಅಲಸಂದಿ ಸೇರಿ ಬಿತ್ತನೆ ಬೀಜ ವಿತರಣೆಗೆ ಜೂನ್ 10 ರವರೆಗೆ 7,369.49 ಕ್ವಿಂಟಲ್‌ನಷ್ಟು ಬಿತ್ತನೆ ಬೀಜ ದಾಸ್ತಾನು ಸ್ವೀಕೃತಿಯಾಗಿದ್ದು, ಈ ಪೈಕಿ 4,707.38 ಕ್ವಿಂಟಲ್ ಬಿತ್ತನೆ ಬೀಜಗಳನ್ನು ವಿತರಿಸಲಾಗಿದೆ. ಸದ್ಯ 2,662.11 ಕ್ವಿಂಟಲ್ ನಷ್ಟು ಬಿತ್ತನೆ ಬೀಜ ದಾಸ್ತಾನು ಇರುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರು ಮಾಹಿತಿ ನೀಡಿದರು.

**ರಸಗೊಬ್ಬರ ದಾಸ್ತಾನು :** 2024–25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಜೂನ್ 10 ರವರೆಗೆ ಜಿಲ್ಲೆಯಲ್ಲಿ ಯೂರಿಯಾ 670 ಟನ್, ಡಿಎಪಿ 1,620 ಟನ್, ಎಂಓಪಿ 310 ಟನ್ ಹಾಗೂ ಕಾಂಪ್ಲೆಕ್ಸ್ 2,537 ಟನ್ ನಷ್ಟು ವಿವಿಧ ರಸಗೊಬ್ಬರ ಲಭ್ಯ ದಾಸ್ತಾನು ಇರುತ್ತದೆ. ಯೂರಿಯಾ, ಡಿಎಪಿ, ಎಂಒಪಿ, ಕಾಂಪ್ಲೆಕ್ಸ್ ಸೇರಿ ಒಟ್ಟು 5,137 ಟನ್‌ನಷ್ಟು ರಸಗೊಬ್ಬರ ಕಾಪು ದಾಸ್ತಾನು ಲಭ್ಯವಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

**ಮೇವು ಲಭ್ಯತೆ:** ಜಿಲ್ಲೆಯಲ್ಲಿ ಜೂನ್ 07 ರಂತೆ ಎಲ್ಲ ತಾಲ್ಲೂಕುಗಳಲ್ಲಿ 31 ವಾರಗಳಿಗೆ ಸಾಕಾಗುವಷ್ಟು ಒಟ್ಟು 4,68,283.84 ಟನ್ ಮೇವು ಲಭ್ಯವಿದೆ ಎಂದು ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ಎಡಿಸಿ ಸಾವಿತ್ರಿ ಬಿ.ಕಡಿ, ಇತರ ಅಧಿಕಾರಿಗಳಿದ್ದರು.

# ಸಿದ್ಧಿವಿನಾಯಕ ದೇವಸ್ಥಾನದ 25ನೇ ವಾರ್ಷಿಕೋತ್ಸವ, ಧಾರ್ಮಿಕ ಕಾರ್ಯಕ್ರಮ



**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆಯ ಸಿದ್ಧಿವಿನಾಯಕ ದೇವಸ್ಥಾನದ 25ನೇ ವಾರ್ಷಿಕೋತ್ಸವ ಜೂನ್ 12 ಮತ್ತು 13 ರಂದು ಅದ್ದೂರಿಯಾಗಿ ನಡೆಯಲಿದೆ ಎಂದು ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ವೈ ರಾಘವೇಂದ್ರಶೆಟ್ಟಿ, ಪ್ರಧಾನ ಕಾರ್ಯದರ್ಶಿ ಪ್ರಹ್ಲಾದ್ ಭೂಪಾಳ ತಿಳಿಸಿದ್ದಾರೆ.

12 ರಂದು ವಿಶೇಷ ಪೂಜೆ ಹಾಗೂ ಸಂಜೆ 6.30 ಗಂಟೆಗೆ ಅಂಜಲಿ ಭರತನಾಟ್ಯ ಕಲಾಸಂದ ಕಲಾವಿದರಿಂದ ಭರತನಾಟ್ಯ, ಶ್ರೀ ಲಕ್ಷ್ಮೀನಾರಾ ಯಣ ಭಜನಾ ಮಂಡಳಿಯವರಿಂದ ಭಜನೆ ಕಾರ್ಯಕ್ರಮ ಹಾಗೂ ವಿಳಾಸ ನಾಯಕ್ ಗಾಯಕನಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು 13 ರಂದು ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜೆ, ಅಲಂಕಾರ, ಗಣಹೋಮ, ಪೂಣ್ಯಾವಾಚನ, ಧ್ವಜಾರೋಹಣ, ಕುಂಭಾಭಿಷೇಕ, ಸಹಸ್ರ ಮೋದಕ ಹೋಮ, ಇತ್ಯಾದಿಗಳು ಅದ್ದೂರಿಯಾಗು ಜರುಗಲಿವೆ. ಹಂಪಿ ಹೇಮಕೂಟ ಸಂಸ್ಥಾನಮಠದ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಪಾಲ್ಗೊಳ್ಳಲಿದ್ದಾರೆ.


# ವಿಜ್ಞಾನ

## ರಕ್ತನಾಳಗಳ ಬಣ್ಣ ಯಾಕೆ ನೀಲಿಯಾಗಿರುತ್ತದೆ?

**ಆರ್.ಬಿ.ಗುರುಬಸವರಾಜ**

ನಮ್ಮ ದೇಹದಲ್ಲಿನ ಸಾಗಾಣಿಕಾ ವ್ಯೂಹದಲ್ಲಿ ರಕ್ತನಾಳಗಳು ಪ್ರಮುಖ ಪಾತ್ರ ವಹಿಸುತ್ತವೆ. ಹೃದಯಕ್ಕೆ ರಕ್ತವನ್ನು ಸಾಗಿಸುವ ಮೂಲಕ ರಕ್ತಕ್ಕೆ ಆಮ್ಲಜನಕ ಸರಬರಾಜು ಮಾಡುವ ಕ್ರಿಯೆಯಲ್ಲಿ ರಕ್ತನಾಳಗಳು ಅವಶ್ಯಕವಾಗಿವೆ. ಚರ್ಮದ ಕೆಳಗಿರುವ ರಕ್ತ ನಾಳಗಳು ನೀಲಿ ಅಥವಾ ಹಸಿರು ಬಣ್ಣದಲ್ಲಿ ಕಾಣುವುದು ಸಾಮಾನ್ಯ. ಆದರೆ ವಾಸ್ತವದಲ್ಲಿ ರಕ್ತ ನಾಳಗಳು ನೀಲಿ ಅಥವಾ ಹಸಿರು ಬಣ್ಣ ಹೊಂದಿಲ್ಲ.

ಚರ್ಮ ಮತ್ತು ಅದರ ಕೆಳಗಿರುವ ರಕ್ತನಾಳಗಳೊಂದಿಗೆ ಬೆಳಕು ಸಂವಹನ ಮಾಡುವುದರಿಂದ ರಕ್ತನಾಳಗಳು ನೀಲಿ ಅಥವಾ ಹಸಿರು ಬಣ್ಣದಲ್ಲಿ ಕಂಡುಬರುತ್ತವೆ. ರಕ್ತನಾಳಗಳ ಬಣ್ಣವು ಬೆಳಕು ಚರ್ಮವನ್ನು ಭೇದಿಸುವ ವಿಧಾನದೊಂದಿಗೆ ಸಂಬಂಧಿಸಿದೆ ಮತ್ತು ರಕ್ತನಾಳಗಳಲ್ಲಿನ ರಕ್ತದಿಂದ ಹೀರಲ್ಪಡುತ್ತದೆ ಅಥವಾ ಪ್ರತಿಫಲಿಸುತ್ತದೆ.



ಬೆಳಕು ಚರ್ಮಕ್ಕೆ ಪ್ರವೇಶಿಸಿದಾಗ ಅದನ್ನು ಅಂಗಾಂಶ ಮತ್ತು ಜೀವಕೋಶಗಳ ವಿವಿಧ ಪದರಗಳಿಂದ ಹೀರಿಕೊಳ್ಳಬಹುದು ಅಥವಾ ಚದುರಿಸಬಹುದು. ಚರ್ಮವು ಕಡಿಮೆ ತರಂಗಾಂತರದ ಬೆಳಕನ್ನು (ನೀಲಿ ಮತ್ತು ಹಸಿರು ಬೆಳಕಿನಂತೆ) ಹೀರಿಕೊಳ್ಳುತ್ತದೆ ಮತ್ತು ಅದೇ ಬಣ್ಣಗಳನ್ನು ಪ್ರತಿಫಲಿಸುತ್ತದೆ. ಆದರೆ ದೀರ್ಘ ತರಂಗಾಂತರದ ಬೆಳಕು (ಕೆಂಪು ಮತ್ತು ಹಳದಿ ಬೆಳಕಿನಂತೆ) ಚರ್ಮದೊಳಗೆ ಆಳವಾಗಿ ತೂರಿಕೊಳ್ಳುತ್ತದೆ.

ನಮ್ಮ ರಕ್ತನಾಳಗಳಲ್ಲಿನ ರಕ್ತವು ಹಿಮೋಗ್ಲೋಬಿನ್ ಎಂಬ ಪ್ರೋಟೀನ್ ಅನ್ನು ಹೊಂದಿರುತ್ತದೆ. ಇದು ನಮ್ಮ ಜೀವಕೋಶಗಳಿಗೆ ಆಮ್ಲಜನಕವನ್ನು ಸಾಗಿಸುತ್ತದೆ. ಹಿಮೋಗ್ಲೋಬಿನ್ ಇದು ಆಮ್ಲಜನಕವನ್ನು ಹೊತ್ತೊಯ್ಯುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಅವಲಂಬಿಸಿ ಬೆಳಕಿನ ವಿಭಿನ್ನ ತರಂಗಾಂತರಗಳನ್ನು ವಿಭಿನ್ನವಾಗಿ ಹೀರಿಕೊಳ್ಳುತ್ತದೆ. ಹಿಮೋಗ್ಲೋಬಿನ್ ಆಮ್ಲಜನಕವನ್ನು ಸಾಗಿಸುವಾಗ, ಅದು ಹೆಚ್ಚು ಕೆಂಪು ಬೆಳಕನ್ನು ಪ್ರತಿಫಲಿಸುತ್ತದೆ. ನಮ್ಮ ರಕ್ತಕ್ಕೆ ಕೆಂಪು ಬಣ್ಣವನ್ನು ನೀಡುತ್ತದೆ. ಇದು ಆಮ್ಲಜನಕವನ್ನು ಸಾಗಿಸದಿದ್ದಾಗ, ಅದು ಹೆಚ್ಚು ನೀಲಿ ಮತ್ತು ಹಸಿರು ಬೆಳಕನ್ನು ಪ್ರತಿಬಿಂಬಿಸುತ್ತದೆ. ಇದು ನೀಲಿ ಅಥವಾ ಹಸಿರು ಬಣ್ಣವನ್ನು ನೀಡುತ್ತದೆ.

ವಾಸ್ತವವಾಗಿ ರಕ್ತನಾಳಗಳ ನೀಲಿ ಅಥವಾ ಹಸಿರು ಬಣ್ಣವು ಚರ್ಮದ ವಿವಿಧ ತರಂಗಾಂತರಗಳನ್ನು ಹೀರಿಕೊಳ್ಳುವ ಮತ್ತು ಚದುರಿಸುವ ವಿಧಾನದಿಂದಾಗಿ,ಹಿಮೋಗ್ಲೋಬಿನ್ ಬೆಳಕಿನ ವಿವಿಧ ತರಂಗಾಂತರಗಳನ್ನು ಹೀರಿಕೊಳ್ಳುವ ಮತ್ತು ಪ್ರತಿಫಲಿಸುವ ವಿಧಾನದೊಂದಿಗೆ ಸಂಯೋಜಿಸಲ್ಪಟ್ಟಿದೆ. ರಕ್ತನಾಳಗಳು ವಾಸ್ತವವಾಗಿ ನೀಲಿ ಅಥವಾ ಹಸಿರು ಅಲ್ಲ.

# ವಸತಿ ನಿಲಯಗಳಿಗೆ ಪ್ರವೇಶ ಆನ್ಲೈನ್ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೂಡ್ಲಿಗಿ**

ಪ್ರಸಕ್ತ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ನಡೆಯುತ್ತಿರುವ ಕೂಡ್ಲಿಗಿ, ಗುಡೇಕೋಟೆ, ಉಜ್ಜಿನಿ ಹಾಗೂ ಕೊಟ್ಟೂರು ಮೆಟ್ರಿಕ್ ಪೂರ್ವ ಬಾಲಕ ಹಾಗೂ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಇಲಾಖೆಯ ವೆಬ್ ಸೈಟ್ ವಿಳಾಸ www.sw.jar.nic.in/ ನಲ್ಲಿ ಇದೇ 15 ನೇ ತಾರೀಖಿನಂದು ಆರಂಭವಾಗುತ್ತದೆ. ಆಸಕ್ತ ವಿದ್ಯಾರ್ಥಿಗಳು ಈ ವೆಬ್ ಸೈಟ್ ಮುಖಾಂತರ ಅರ್ಜಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ಕೂಡ್ಲಿಗಿ ಸಂಪರ್ಕಿಸಬಹುದು. ವಿದ್ಯಾರ್ಥಿಗಳು ಈ ಕೆಳಕಂಡ ದಾಖಲೆಗಳ ಮೂಲಕ ಅರ್ಜಿ ಸಲ್ಲಿಸಬೇಕು. ಸ್ಯಾಟ್ ಸಂಖ್ಯೆ, ಆಧಾರ್ ಸಂಖ್ಯೆ, ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು, ವಿದ್ಯಾರ್ಥಿ ಫೋಟೊ, ಬ್ಯಾಂಕ್ ಖಾತೆ ಸಂಖ್ಯೆ ಕಡ್ಡಾಯ, ಮೊಬೈಲ್ ಸಂಖ್ಯೆ, ಹಿಂದಿನ ವರ್ಷದ ಅಂಕ ಪಟ್ಟಿಯ ವಿವರ ಮತ್ತು ತಂದೆ, ತಾಯಿಯ ಆಧಾರ ಸಂಖ್ಯೆ ಯೊಂದಿಗೆ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಕೋರಿದ್ದಾರೆ.

OM ENTERPRISES
Disposible Items Production & Wholesale

Available: Paper Tea Cup - Water Cup - Juice Cup - Bowl & Plate Etc.
M:94487 17137, 83109 88292
Chitrakeri, Hosapete-583201, Vijayanagara Dist.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join for to Get Daily E-paper

## ನಿತ್ಯ ಪಂಚಾಂಗ

ಮಾಸ: ವೈಶಾಖ | ಸಂವತ್ಸರ: ಕ್ರೋಧಿ

**12–06–2024 – ಬುಧವಾರ**

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮಾಘಾ |
| ಯೋಗ | : ಹರ್ಷಣ |
| ಕರಣ | : ಕೌಳವ |
| ಸೂರ್ಯೋದಯ | : 05:41:57 |
| ಸೂರ್ಯಾಸ್ತ | : 19:11:56 |
| ರಾಹು | : 12:27–14:08 |
| ಯಮಘಂಡ | : 07:23–09:04 |
| ಗುಳಿಕ | : 10:46–12:27 |

## ತುಂಗಭದ್ರಾ ನೀರಿನ ಮಟ್ಟ



**ಮಂಗಳವಾರ : 11–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1580.90 ಅಡಿ |
| ಒಳ ಹರಿವು | 4024 ಕ್ಯುಸೆಕ್ |
| ಹೊರ ಹರಿವು | 8 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 4.924 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1581.07 ಅಡಿ |
| ಒಳ ಹರಿವು | 341 ಕ್ಯುಸೆಕ್ |
| ಹೊರ ಹರಿವು | 245 ಕ್ಯುಸೆಕ್ |
| ಸಾಮರ್ಥ್ಯ | 5.013 ಟಿಎಂಸಿ |

# ಅಂತರಾಷ್ಟ್ರೀಯ ಯೋಗ ದಿನಾಚರಣೆ; ಜೂ.13 ಪೂರ್ವಭಾವಿ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಜೂನ್ 21 ರಂದು 10 ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಆಚರಣೆ ಸಂಬಂಧ ಜೂನ್ 13 ರಂದು ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಏರ್ಪಡಿ ಸಲಾಗಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ಸುಜಾತ ಅವರು ತಿಳಿಸಿದ್ದಾರೆ.

# ಇಂದು ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಗ್ರಾಮೀಣ ಜೆಸ್ಕಾಂ ವ್ಯಾಪ್ತಿಯ ಎಮ್ಮಿಗನೂರಿನ 33/11ಕೆ.ವಿ ಉಪ–ಕೇಂದ್ರದಲ್ಲಿರುವ 11ಕೆ.ವಿ ಮಾರ್ಗಗಳ ಭಾರವನ್ನು ಹೊಸದಾಗಿ ನಿರ್ಮಿಸಿರುವ 110/11ಕೆ.ವಿ ಉಪ–ಕೇಂದ್ರಕ್ಕೆ ವರ್ಗಾಯಿಸುವ ಕಾರ್ಯವನ್ನು ತುರ್ತಾಗಿ ಕೈಗೊಳ್ಳುತ್ತಿರುವುದರಿಂದ ಜೂನ್ 12 ರಂದು ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ಕೆಳಗಿನ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯವಾಗಲಿದೆ ಎಂದು ಗ್ರಾಮೀಣ ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಮೋಹನಬಾಬು ಅವರು ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA